ಣ ಪ್ರಸ ಗ್ರಂಥಮಾಲೆ
೩೦೫

ಶಿರಾಲಿಯ ಗೊಂಡರು

ನಾರಾಯಣ ಯಾಜಿ

ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ
ಡಿಸೆಂಬರ, ೧೯೭೯

ಉಪನ್ಯಾಸ ಗ್ರಂಥಮಾಲೆ

೩೦೫

ಶಿರಾಲಿಯ ಗೊಂಡರು

ಶ್ರೀ ನಾರಾಯಣ ಯಾಜಿ

ಪ್ರಸಾರಾಂಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
ಡಿಸೆಂಬರ, ೧೯೭೯

ಪ್ರಕಾಶಕರು :

ಸಿ. ಎಸ್. ಕಣವಿ

ನಿರ್ದೇಶಕರು,

ಪ್ರಸಾರಾಂಗ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ–೫೮೦ ೦೦೩

ಪ್ರಥಮ ಮುದ್ರಣ : ೫,೦೦೦ ಪ್ರತಿಗಳು

ಡಿಸೆಂಬರ, ೧೯೭೯

ಬೆಲೆ : ೫೦ ಪೈಸೆ

ಮುದ್ರಕರು :

ಜಿ. ಬಿ. ಮನ್ವಾಚಾರ

ಸಹಾಯಕ ನಿರ್ದೇಶಕರು,

ಕರ್ನಾಟಕ ವಿಶ್ವವಿದ್ಯಾಲಯ ಮುದ್ರಣಾಲಯ

ಧಾರವಾಡ–೫೮೦ ೦೦೩

ಮುನ್ನುಡಿ

ಕರ್ನಾಟಕ ವಿಶ್ವವಿದ್ಯಾಲಯವು ತನ್ನ ಪ್ರಸಾರಾಂಗದ ಮುಖಾಂತರ ಕೈಕೊಂಡು ನಡೆಸುತ್ತಿರುವ ಜ್ಞಾನಪ್ರಸಾರದ ಯೋಜನೆಗಳಲ್ಲಿ ಈ 'ಉಪನ್ಯಾಸ ಗ್ರಂಥಮಾಲೆ' ಅತ್ಯಂತ ಮುಖ್ಯವೂ ಜನಪ್ರಿಯವೂ ಆಗಿರುವುದು ಹೆಮ್ಮೆಯ ಮಾತಾಗಿದೆ. ವಿಶ್ವವಿದ್ಯಾಲಯದ ಆಡಳಿತ ಕ್ಷೇತ್ರದಲ್ಲಿರುವ ಎಂಟು ಜಿಲ್ಲೆಗಳಲ್ಲಿಯೂ ಉಪನ್ಯಾಸ ಶಿಬಿರಗಳನ್ನು ಏರ್ಪಡಿಸಲಾಗುತ್ತಿದ್ದು, ವಿಶ್ವವಿದ್ಯಾಲಯದ ಮತ್ತು ಇದಕ್ಕೆ ಸೇರಿದ ಕಾಲೇಜುಗಳ ಪ್ರಾಧ್ಯಾಪಕರು ಸಾಹಿತ್ಯ, ವಿಜ್ಞಾನ, ಸಾಮಾಜಿಕಶಾಸ್ತ್ರ ಮೊದಲಾದ ಶಾಖೆಗಳಿಗೆ ಸಂಬಂಧಪಟ್ಟ ವಿಷಯಗಳನ್ನು ಆಯ್ದುಕೊಂಡು, ಶಾಸ್ತ್ರಸಮ್ಮತವಾದ ಸರಣಿಯಲ್ಲಿ, ಜನಸಾಮಾನ್ಯರಿಗೆ ತಿಳಿಯುವ ಶೈಲಿಯಲ್ಲಿ ಈ ಶಿಬಿರಗಳಲ್ಲಿ ಉಪನ್ಯಾಸಗಳನ್ನು ಕೊಡುತ್ತಾರೆ. ವಿಶ್ವವಿದ್ಯಾಲಯದ ಜ್ಞಾನ ಭಾಂಡಾರದ ಅಲ್ಪಾಂಶವನ್ನಾದರೂ ಮಹಾಜನರ ಮನೆ ಬಾಗಿಲಿಗೆ ಒಯ್ದು ಮುಟ್ಟಿಸಬೇಕೆಂದು ಮಾಡಿದ ಈ ಪ್ರಯತ್ನಕ್ಕೆ ನಮ್ಮ ನಿರೀಕ್ಷೆಗೆ ಮೀರಿದ ಮೆಚ್ಚಿಕೆಯೂ, ಪ್ರೋತ್ಸಾಹವೂ ದೊರೆಯುತ್ತಿವೆ. ಜನರು ತಾವಾಗಿಯೇ ಮುಂದೆ ಬಂದು ತಮ್ಮ ತಮ್ಮ ಊರುಗಳಲ್ಲಿ ಈ ಉಪನ್ಯಾಸಗಳನ್ನು ಏರ್ಪಡಿಸಲು ವಿಶ್ವವಿದ್ಯಾಲಯಕ್ಕೆ ಬರೆದು ಬಿನ್ನವಿಸಿ

ಕೊಳ್ಳುತ್ತಿರುವುದು ನಿಜವಾಗಿಯೂ ಸಂತೋಷದ ಸಂಗತಿಯಾಗಿದೆ.

ಈ ಜ್ಞಾನ ಪ್ರಸಾರ ಕಾರ್ಯದಲ್ಲಿ ಭಾಗವಹಿಸುವದರಿಂದ, ವಿಶ್ವವಿದ್ಯಾಲಯ ಹಾಗೂ ಕಾಲೇಜುಗಳ ಅಧ್ಯಾಪಕರಿಗೆ ಆಯಾ ಪ್ರದೇಶದ ಜನತೆಯೊಡನೆ ಹೆಚ್ಚಿನ ಸಂಪರ್ಕ ಒದಗುವದಲ್ಲದೆ ಎಂತಹ ವಿಷಯವನ್ನಾದರೂ ಕನ್ನಡದಲ್ಲಿ ತಿಳಿಸಿ ಹೇಳುವ ಹಾಗೂ ಅದನ್ನು ಸುಲಭ ಶೈಲಿಯಲ್ಲಿ ಬರವಣಿಗೆಯಲ್ಲಿಳಿಸುವ ಅವಕಾಶ ದೊರೆಯುತ್ತದೆ. ಈ ಕಾರ್ಯದಲ್ಲಿ ಅವರೆಲ್ಲರೂ ಮನವಿಟ್ಟು ಸಹಕರಿಸುತ್ತಿರುವುದು ಶ್ಲಾಘನೀಯ.

ಈ ಮಾಲೆಯಲ್ಲಿ ಈಗಾಗಲೇ ೩೦೪ ಪುಸ್ತಿಕೆಗಳು ಪ್ರಕಟವಾಗಿವೆ. ಅವು ಅಚ್ಚಾಗಿ ಹೊರಬಂದೊಡನೆ ಅವುಗಳ ಸಾವಿರಾರು ಪ್ರತಿಗಳನ್ನು ಜನರು ಕೊಂಡು ಓದುತ್ತಾರೆ. ಅನೇಕ ಪುಸ್ತಿಕೆಗಳು ನಾಲ್ಕು-ಐದು ಮುದ್ರಣಗಳನ್ನು ಕಂಡಿರುವುದು ಈ ಮಾಲೆಯ ಉಪಯುಕ್ತತೆಯನ್ನೂ, ಜನಪ್ರಿಯತೆಯನ್ನೂ ವ್ಯಕ್ತಗೊಳಿಸುತ್ತದೆ. ಇದು ನಾಡಿನ ಪ್ರಗತಿಯ ಚಿಹ್ನೆಯೆಂದು ಭಾವಿಸುತ್ತೇನೆ.

ವಿಶ್ವವಿದ್ಯಾಲಯದ ಈ ಸೇವೆಯ ಸಂಪೂರ್ಣ ಪ್ರಯೋಜನ ಪಡೆದು ಸಾಮಾನ್ಯ ಜನತೆ ನಾಡಿನ ಸರ್ವತೋಮುಖ ಪ್ರಗತಿಯಲ್ಲಿ ಪಾಲುಗೊಳ್ಳಲೆಂದು ಹಾರೈಸುತ್ತೇನೆ.

ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ

ಎಸ್. ಎಸ್. ಒಡೆಯರ
ಕುಲಪತಿಗಳು

ಅರಿಕೆ

ಕಾಲಯುಕ್ತ ಸಂವತ್ಸರ ಪುಷ್ಯಮಾಸದ ಮಕರ ಸಂಕ್ರಾಂತಿಯ ಶುಭದಿನದಂದು (ದಿ. ೧೪-೧-೧೯೭೯) ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪೂರ ಬಳಿಯ ವಜ್ರಳ್ಳಿಯಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಪ್ರಸಾರಾಂಗವು ಏರ್ಪಡಿಸಿದ ಉಪನ್ಯಾಸ ಶಿಬಿರದಲ್ಲಿ 'ಶಿರಾಲಿಯ ಗೊಂಡರು' ಎಂಬ ವಿಷಯದ ಮೇಲೆ ನಾನೊಂದು ಉಪನ್ಯಾಸವನ್ನಿತ್ತೆ. ಆ ಉಪನ್ಯಾಸವನ್ನೇ ಈ ಪುಟ್ಟ ಪುಸ್ತಕದಲ್ಲಿ ಸಂಗ್ರಹಿಸಿ ನೀಡಿದ್ದೇನೆ.

ಅಗಸ್ಟ ೭, ೧೯೭೭ ರ 'ಪ್ರಜಾವಾಣಿ'ಯ ಸಾಪ್ತಾಹಿಕ ಪುರವಣಿಯಲ್ಲಿ ಪ್ರಕಟವಾದ ಶಿರಾಲಿಯ ಗೊಂಡರ ಕುರಿತ ನನ್ನ ಸಚಿತ್ರ ಲೇಖನವನ್ನು ನೋಡಿ, ಕರ್ನಾಟಕ ವಿಶ್ವ ವಿದ್ಯಾಲಯ ಪ್ರಸಾರಾಂಗದ ನಿರ್ದೇಶಕರಾದ ಖ್ಯಾತ ಕವಿ ಶ್ರೀ ಚೆನ್ನವೀರ ಕಣವಿ ಅವರು ಈ ನನ್ನ ಉಪನ್ಯಾಸವನ್ನು ಏರ್ಪಡಿಸಿದರು. ಈ ಬಗ್ಗೆ ನಾನು ಪ್ರಜಾವಾಣಿಯ 'ಸಾಪ್ತಾಹಿಕ ಪುರವಣಿ' ವಿಭಾಗದ ಸಂಪಾದಕರಾದ ಶ್ರೀ ಬಿ. ವಿ. ವೈಕುಂಠರಾಜು ಅವರಿಗೂ ಕರ್ನಾಟಕ ಶವಿ್ವ ವಿದ್ಯಾಲಯದ ಪ್ರಸಾರಾಂಗದ ನಿರ್ದೇಶಕರಾದ ಶ್ರೀ ಚೆನ್ನವೀರ

ಕಣವಿ ಅವರಿಗೂ ಆಭಾರಿಯಾಗಿದ್ದೇನೆ. ಅವರಿಗೆ ನನ್ನ ಹೃತ್ಪೂರ್ವಕ ಕೃತಜ್ಞತೆಗಳು.

ಈ ಪುಸ್ತಿಕೆಯು ಶೀಘ್ರ ಪ್ರಕಟವಾಗುವಂತೆ ಆಸಕ್ತಿ ವಹಿಸಿ ಸಹಕರಿಸಿದ ಪ್ರಸಾರಾಂಗದ ಉಪನಿರ್ದೇಶಕರಾದ ಶ್ರೀ ಎಸ್. ಬಿ. ನಾಯಕ ಅವರಿಗೂ, ಸಹಾಯಕ ನಿರ್ದೇಶಕ ರಾದ ಶ್ರೀ ಎಲ್. ಎಂ. ಗುಡ್ಡೀನ ಅವರಿಗೂ ಮತ್ತು ಸುಂದರವಾದ ಕೆಲವು ಛಾಯಾಚಿತ್ರಗಳನ್ನು ತೆಗೆದು ಈ ಪುಸ್ತಕದಲ್ಲಿ ಪ್ರಕಟನೆಗಾಗಿ ನೀಡಿದ ಗೆಳೆಯ ಶ್ರೀ ಶಿವರಂಜನ ಗುಲ್ವಾಡಿಯವರಿಗೂ ಕೃತಜ್ಞತೆಗಳು. ಡಾ. ಎಲ್. ಆರ್. ಹೆಗಡೆಯವರ 'ಗೊಂಡರ ಪದಗಳು' ಎಂಬ ಪುಸ್ತಕ ಗೊಂಡರ ಪದಗಳನ್ನು ಸಂಗ್ರಹಿಸುವಾಗ ನನಗಿತ್ತ ಸಹಾಯ ವನ್ನೂ ಇಲ್ಲಿ ಸ್ಮರಿಸದಿರಲಾರೆ.

ಶೀರವಿಠ್ಠಲ ರಸ್ತೆ
ಭಟಕಳ (ಉ. ಕ.) ನಾರಾಯಣ ಯಾಜಿ
ದಿ. ೧–೧೨–೧೯೭೯

ಪರಿವಿಡಿ



ಗೊಂಡರ ಕುಟುಂಬ

೧. ಪೀಠಿಕೆ

ಉತ್ತರ ಕನ್ನಡ ಜಿಲ್ಲೆಯ ಶಿರಾಲಿಯ ಸಿಂಡಿಕೇಟ ಬ್ಯಾಂಕಿನಲ್ಲಿ ಈಗ ಸೇವೆಸಲ್ಲಿಸುತ್ತಿರುವ ಶ್ರೀ ಕುಪ್ಪಾ ಸಂಣ್ಯಾಸಾ ಗೊಂಡ ಅವರ ಪ್ರಯತ್ನದ ಫಲವಾಗಿ ಎಳೆಂಟು ವರ್ಷಗಳ ಹಿಂದೆ ಭಾರತ ಸರಕಾರವು ಶಿರಾಲಿಯ ಗೊಂಡರನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಿ, ಹಿಂದುಳಿದ ವರ್ಗಗಳಿಗೆ ಸಲ್ಲತಕ್ಕ ಸಕಲ ಸವಲತ್ತುಗಳನ್ನೂ, ರಿಯಾಯಿತಿಗಳನ್ನೂ ಅವರಿಗೆ ಘೋಷಿಸಿದೆ. ಭಾರತ ಸರಕಾರದ ಈ ಕ್ರಮದಿಂದಾಗಿ ಈಗ ಶಿರಾಲಿಯ ಗೊಂಡರು ಭಾರತೀಯ ಸಂವಿಧಾನದ ಪರಿಚ್ಛೇದ ೩೧೪ ಮತ್ತು ೩೪೨ರಲ್ಲಿ ಪರಿಶಿಷ್ಟ ಪಂಗಡವೆಂದು ಸೇರಿಸಲ್ಪಟ್ಟಿದ್ದಾರೆ.

ಉತ್ತರ ಕನ್ನಡ ಜಿಲ್ಲೆಯ ಅತ್ತೆ ಒಕ್ಕಲು ಸಮಾಜದಲ್ಲಿ (೧) ಕೂಡುಒಕ್ಕಲು (೨) ಹಾಲಕ್ಕಿ ಒಕ್ಕಲು, (೩) ಗೊಂಡ ಬುಡಕಟ್ಟಿನ ಗ್ರಾಮಒಕ್ಕಲು (೪) ಕರಿಒಕ್ಕಲು ಮತ್ತು (೫) ಕುಂಚ ಒಕ್ಕಲು ಎಂಬ ಐದು ಭಾಗಗಳು. ಕುಮಟಾ ಕಡೆ ಹಾಲಕ್ಕಿ ಒಕ್ಕಲಿಗರಿಗೆ 'ಗೌಡರು' ಎನ್ನು

ವಂತೆ, ಶಿರಾಲಿ ಭಟಕಳಗಳಲ್ಲಿ ಗೊಂಡರಿಗೆ 'ಗೌಡ' ಎಂದು ಕೆಲವರು ಹೇಳಿದರೂ, ಹಾಲಕ್ಕಿ ಒಕ್ಕಲಿಗರಿಗೂ ಶಿರಾಲಿಯ ಸುತ್ತಮುತ್ತಲಿನ ಗೊಂಡರಿಗೂ ಬೇರಾವ ಸಾಮ್ಯಗಳು (Similarity) ಕಾಣುವದಿಲ್ಲ. ಗೊಂಡರು ತಮ್ಮ ಧಾರ್ಮಿಕ, ಸಾಮಾಜಿಕ ಮತ್ತು ವೈವಾಹಿಕ ಜೀವನಗಳಲ್ಲಿ ಹಾಲಕ್ಕಿ ಒಕ್ಕಲಿಗರಿಗಿಂತ ಕೆಳಮಟ್ಟದವರೆಂದು ಪರಿಗಣಿಸಲ್ಪಟ್ಟಿದ್ದು, ಭಟಕಳ ತಾಲೂಕಿನಲ್ಲಿ ಮಾತ್ರ, ಅದರಲ್ಲೂ ವಿಶೇಷವಾಗಿ ಶಿರಾಲಿಯಲ್ಲಿ ಹಾಗೂ ಶಿರಾಲಿಯ ಸುತ್ತಮುತ್ತಲಿನ ಊರು ಗಳಲ್ಲಿ, ಕಾಣಸಿಗುತ್ತಾರೆ. ಅದಕ್ಕೆಂದೇ ಇವರನ್ನು 'ಶಿರಾಲಿಯ ಗೊಂಡರು' ಎಂದು ಕರೆಯಲಾಗಿದೆ.

ಒಂದು ಶನಿವಾರ ದಿವಸ 'ದೇವರ ಕಾರ್ಯ' ಇರುವ ಒಬ್ಬ ಗೊಂಡನ ಮನೆಗೆ ನಾನು ಫೋಟೋಗ್ರಾಫರ್ ಗೆಳೆಯ ಶ್ರೀ ಶಿವರಂಜನ್ ಗುಲ್ವಾಡಿಯವರ ಜೊತೆ ಹೋದಾಗ, ನಾವು ಗೊಂಡರ ಹಿತ್ತಲಿಗೆ ಪಾದಾರ್ಪಣ ಮಾಡುತ್ತಿದ್ದಂತೆ ನಮ್ಮ ಆಗಮನ ತಿಳಿದ ಗೊಂಡರು ನಮ್ಮ ಶರ್ಟ-ಪ್ಯಾಂಟು ಗಳನ್ನು ನೋಡಲು ಕುತ್ತಿಗೆ ಎತ್ತಿದರು, ಶಿವರಂಜನ್‌ರ ಕ್ಯಾಮರಾ ನೋಡಲು ಕಣ್ಣಗಲಿಸಿದರು. 'ಕಾರ್ಯ'ಕ್ಕೆ ಬಂದ 'ಸೀಮೆಗೊಂಡ' ಕುಳಿತ ಮಂಚದ ಮೇಲೆಯೇ ಕೂಡ್ರಲು ನಮಗಿಷ್ಟು ಜಾಗ ತೆರವು ಮಾಡಿಕೊಟ್ಟು - ನಮ್ಮನ್ನು ಕೂಡ್ರಿಸಿ, ಸೀಯಾಳ (ಎಳೆನೀರು) ನೀಡಿ ಉಪಚರಿಸಿದರು.

ಗೊಂಡರ ಫೋಟೋಗಳನ್ನು ತೆಗೆಯಲು ಗುಲ್ವಾಡಿ ಯವರು ಕ್ಯಾಮರಾ 'ಎಡ್ಜಸ್ಟ್' ಮಾಡುತ್ತಿರುವಾಗ ವಿಷಯ

ತಿಳಿದ ಗೊಂಡರು ತಮ್ಮ ಫೋಟೋ ತೆಗೆಸಿಕೊಳ್ಳಲು ಏನು ಮಾಡಿದರೂ ಒಪ್ಪಲಿಲ್ಲ. ಭಾವಚಿತ್ರ ತೆಗೆಸಿಕೊಂಡರೆ ತಮ್ಮ ಆಯುಷ್ಯ ಕಡಿಮೆಯಾಗುವದೆಂಬ ಕಾರಣಕ್ಕಾಗಿ ಅವರು ಹೀಗೆ ವರ್ತಿಸಿದರೆಂದು ನಮಗೆ ಆಮೇಲೆ ತಿಳಿಯಿತು. ಶಿವರಂಜನ್‌ರು ಮಾತ್ರ ಗೊಂಡರಿಗೆ ತಿಳಿಯದ ಹಾಗೆ ಕೆಲವು ಫೋಟೋಗಳನ್ನು ಸೆರೆಹಿಡಿಯುವದರಲ್ಲಿ ಯಶಸ್ವಿಯಾಗಿದ್ದರು.

೨. ಗೊಂಡರ ಮೂಲ

ಈ ಜನರಿಗೆ 'ಗೊಂಡ' ಎಂಬ ಹೆಸರು ಹೇಗೆ ಬಂದಿತು ಎಂಬುದನ್ನು ತಿಳಿಯುವದೇ ಕಷ್ಟವಾಗಿದೆ. ತಮ್ಮ ಮೂಲದ ಬಗ್ಗೆ ಗೊಂಡರಿಗೆ-ಭೂಮಿಯ ಪುತ್ರರಾದ ತಾವು ಭೂಮಿಯ ಹುಟ್ಟಿನಿಂದಲೇ ಭೂಮಿಯ ಮೇಲಿರುವದಾಗಿ ನಂಬಿಕೆ-ಅಂತೆಯೇ ತಾವು ತಿರುಪತಿಗುಡ್ಡದ ಕಡೆಯಿಂದ ಶಿರಾಲಿಗೆ ಬಂದುದಾಗಿ ಗೊಂಡರ ಹಿರಿಯರು ಹೇಳುತ್ತಾರೆ.

ಆಂಧ್ರದಿಂದ ಈ ಕಡೆಗೆ ವಲಸೆ ಬಂದ ಜನರಲ್ಲಿ ಕುಮಟಾ ತಾಲೂಕಿನಲ್ಲಿರುವ ಹಾಲಕ್ಕಿ ಒಕ್ಕಲಿಗರೂ ಸೇರಿದ್ದರೆಂದು ಊಹೆಯಿದೆ. ಆ ಜನರು ಳಕಾರ ಶಬ್ದಕ್ಕೆ ಲಕಾರವನ್ನು ಪ್ರಯೋಗಿಸುವ ಭಾಷಾ ಪ್ರಯೋಗದ ವೈಶಿಷ್ಟ್ಯವು, ನಮ್ಮ ಜಾನಪದ ಕಥನ ಗೀತೆಗಳಲ್ಲಿ ಬರುವ ಮೂಡಿನ

(ಪೂರ್ವದ) ಸಮುದ್ರದ ಉಲ್ಲೇಖವೂ ಹಾಲಕ್ಕಿ ಒಕ್ಕಲಿಗರು ಮತ್ತು ಇತರ ಕೆಲವು ಒಕ್ಕಲಿಗರು ಆಂಧ್ರದಿಂದ ಈ ಕಡೆಗೆ ವಲಸೆ ಬಂದಿರಬೇಕೆಂಬ ಡಾ. ಎಲ್. ಆರ್. ಹೆಗಡೆಯವರ ವಾದವನ್ನು ಸಮರ್ಥಿಸುತ್ತವೆ. ಅದರಂತೆ ಗೋಂಡರೂ ಆಂಧ್ರ ದಿಂದ ವಲಸೆ ಬಂದರೆಂದು ತಿಳಿಯಬಹುದಾದರೂ ಇದನ್ನು ಸಮರ್ಥಿಸಲು ಹೆಚ್ಚಿನ ಆಧಾರಗಳಿಲ್ಲ. ಹಾಲಕ್ಕಿ ಒಕ್ಕಲಿಗ ರಂತೆ ಗೊಂಡರೂ ತಿರುಪತಿ ತಿಮ್ಮಪ್ಪನನ್ನೇ ಮುಖ್ಯ ದೇವ ರೆಂದು ನಂಬಿ ಪೂಜಿಸುತ್ತಾರೆ.

೩. ಜನಜೀವನ

ಕರ್ನಾಟಕ ರಾಜ್ಯದ ಸಮಾಜಕಲ್ಯಾಣ ಇಲಾಖೆಯು ೧೯೭೪ರಲ್ಲಿ ನಡೆಸಿದ ಸಮೀಕ್ಷೆಯೊಂದರ ಪ್ರಕಾರ ಭಟಕಳ ತಾಲೂಕಿನ ಗೊಂಡರ ಜನಸಂಖ್ಯೆ ೩೭೨೬, ಮತ್ತು ಅವರ ಕುಟುಂಬಗಳಿರುವದು ೪೮೬ ಮಾತ್ರ. ತಮ್ಮ ಒಡೆಯರ ಮೇಲಿರುವ ಅಚಲನಂಬಿಕೆ, ಪ್ರೀತಿ, ಕೃತಜ್ಞತೆಗಳಿಂದಾಗಿ ಅದೆಷ್ಟೋ ರೈತ ಗೊಂಡರು ಈ ದಿನದ ವರೆಗೂ ಭೂನ್ಯಾಯ ಮಂಡಳಕ್ಕೆ ಡಿಕ್ಲರೇಶನ್ ಕೊಟ್ಟಿಲ್ಲ!

ಹೆಸರುಗಳು— ಇವರಲ್ಲಿ ಬಳಕೆಯಲ್ಲಿರುವ ಹೆಸರು ಗಳಲ್ಲೂ ವೈಶಿಷ್ಟ್ಯ ನೋಡಬಹುದಾಗಿದೆ. ಕೆಲವು ಗಂಡಸರ ಹೆಸರುಗಳು– ಕುಪ್ಪಾ, ಬಡಿಯಾ, ಸಂಣು, ಮೋಳಿಯ, ದೇವಯ್ಯ, ಸೋಮಯ್ಯ, ತಿಂಮಪ್ಪ, ಮಂಜು, ಮಾಸ್ತಿ,

ಮಾಡ್ಯಗಿರಿ ಇತ್ಯಾದಿಯಾದರೆ, ಕೆಲವು ಹೆಂಗಸರ ಹೆಸರುಗಳು ಮಂಗಳಿ, ಶುಕ್ರಿ, ಅಮ್ಮ, ಸೋಮಿ, ಬಡಕಿ, ಮಾಸ್ತಿ, ಇತ್ಯಾದಿ. 'ಮಾಸ್ತಿ' ಎಂಬದು ಸ್ತ್ರೀ - ಪುರುಷರಿಬ್ಬರಿಗೂ ಇಡುವಂತಹ ಹೆಸರು.

ಗೊಂಡರ ಭಾಷೆ— ಗೊಂಡರ ಆಡುಭಾಷೆ ಉ. ಕ. ಹಾಗೂ ಕೋಟದ ಕನ್ನಡ ಇವೆರಡರ ಮಿಶ್ರಣದಂತೆ ಕಾಣಿಸುತ್ತದೆ. ಇದು ಹಾಡಿನ ರೂಪದಲ್ಲಿ ಉ.ಕ.ದ ಇತರ ಕಡೆಗಳ ಹಾಡುಗಳ ಭಾಷೆಯನ್ನು ಹೋಲುತ್ತದೆ. ಕೆಲವು ವಿಶೇಷವಾದ ವ್ಯಾಕರಣ ವೈಶಿಷ್ಟ್ಯಪೂರ್ಣ ಶಬ್ದಗಳೂ ಉಂಟು. ಉದಾಃ-'ಇಲ್ಲ' ಎನ್ನಲು ಕೋಟ ಕನ್ನಡದಲ್ಲಿ ಹೇಳುವ ಹಾಗೆ 'ಇಲ್ಲೆ' ಎಂತಲೇ ಗೊಂಡರೂ ಹೇಳುತ್ತಾರೆ. 'ಅಂತೆ' ಎನ್ನಲು 'ಅಂಬ್ರು' ಎಂದರೆ, 'ಹೋಗುತ್ತಾರೆ' ಎನ್ನಲು 'ಹೋತ್ರು' 'ಹ್ವಾಪ್ರು' ಎಂದು ಹೇಳುತ್ತಾರೆ. ಹೋಗುತ್ತಾನಂತೆ ಎಂಬುದನ್ನು 'ಹೋತ್ನಂಬ್ರು' ಎಂಬ ಶಬ್ದದಿಂದ ತಿಳಿಸುತ್ತಾರೆ. 'ಮನೆಯಲ್ಲಿ' ಎಂಬ ಸಪ್ತಮೀ ವಿಭಕ್ತಿ ಶಬ್ದ 'ಮನ್ಲಿ' ಎಂದಾದರೂ ಗತ್ತಿನಲ್ಲಿ ಎಂಬುದು 'ಗತ್ನಾಗೆ', ಎಂದಾಗುತ್ತದೆ. 'ಹೊರಟು' 'ಹರಟೆ' ಮುಂತಾದ ಶಬ್ದಗಳ ರಕಾರ ಐ ಅಥವಾ ಯ್ ಆಗಿ ಆ ಶಬ್ದಗಳು ಕ್ರಮವಾಗಿ ಹೈಟು, ಹಯ್‌ಟೆ ಎಂದೂ 'ಕೇಳಿದ' ಎಂಬುದು 'ಕೇಂಡ' ಎಂದೂ ಆಗುತ್ತದೆ ಇಲ್ಲವಲ್ಲ, ಬಂದನಲ್ಲ ಎಂಬ ಶಬ್ದಗಳು ಗೊಂಡರ ಬಾಯಿಯಲ್ಲಿ ಇಲಿಯಾಲ, ಬಂದನಾಲ, ಇಲು

ವಾಲೋ, ಬಂದುನಾಲೋ ಎಂದಾಗುತ್ತವೆ. ಇನ್ನು ಬರುವಾಗ, ಹೋಗುವಾಗ ಶಬ್ದಗಳು 'ಬಪ್ಪಂಗೆ' 'ಹೋಪಂಗೆ' ಎಂದಾಗುತ್ತವೆ.

ಶಬ್ದಗಳಲ್ಲಿನ ಸ್ವರಗಳು ಬೇರೆ ಸ್ವರಗಳ ರೂಪ ಪಡೆಯುವದು ಸಾಮಾನ್ಯ. ಉದಾಹರಣೆಗಾಗಿ :

ಇಕಾರದಿಂದ ಉಕಾರ—ಬಾಗಿಲು-ಬಾಗೂಲು; ಬೆಳ್ಳಿ-ಬೆಳ್ಳು; ಅಡಿಗೆ–ಅಡುಗಿ.

ಉಕಾರದಿಂದ ಇಕಾರ— ಕಂಡುಕೊಂಡು – ಕಂಡುಕೊಂಡಿ.

ಎಕಾರದಿಂದ ಇಕಾರ— ಅರಳೆ–ಅರಳಿ; ಮೂಲೆ-ಮುಲ್ಲಿ.

ಎಕಾರದಿಂದ ಉಕಾರ— ನಡೆದು–ನೆಡುದು.

ಅಕಾರದಿಂದ ಎಕಾರ—ಗದ್ದೆ–ಗೆದ್ದಿ, ಗಡ್ಡೆ–ಗೆಂಡೆ.

ಸ್ವರಗಳಿಗೆ ಯಕಾರ ಆಗಮ— ಇರುವೆ-ಯರು, ಎಚ್ಚರಿಕೆ-ಯುಚ್ಚರುಕಿ, ಎಂಜಲ–ಯುಂಜ್ಲ.

ಅಕಾರಕ್ಕೆ ಉಕಾರಾದೇಶ–ಕಾಳಗ-ಕಾಳುಗು, ವಜ್ರ-ವಜ್ಜುರು, ಮಗಳು–ಮುಗುಳು.

ವಕಾರಕ್ಕೆ ಇಕಾರಾದೇಶ—ವಿದ್ಯಾ- ಇದ್ದಿ.

ಸ್ವರಗಳಿಂದ ಪ್ರಾರಂಭಗೊಳ್ಳುವ ಶಬ್ದಗಳಿಗೆ ಪ್ರಾರಂಭವಲ್ಲಿ ಲಕಾರ ಸೇರುವದನ್ನು ಮುಂದೆ ಗೊಂಡರ ಪದಗಳ ಕುರಿತು ತಿಳಿದುಕೊಳ್ಳುವಾಗ ನೋಡಬಹುದಾಗಿದೆ.

ಉದಾ: ಆಗಳು-ಲಾಗಳು; ಅಕ್ಕ-ಲಕ್ಕ. ಇರುತ್ತಿವನೋ-ಲಿರುತಿವನೋ ಇತ್ಯಾದಿ.

ಉಡುಗೆ ತೊಡುಗೆ: ಶಿರಾಲಿಯ ಗೊಂಡರಿಗೆ ಅವರದೇ ಆದ ವಿಶಿಷ್ಟ ಉಡುಗೆ-ತೊಡುಗೆಗಳಿವೆ. ಪುರುಷರು ಸಣ್ಣ ಪಂಚೆಯನ್ನುಟ್ಟು ಮೇಲ್ಗಡೆ ಬನಿಯನ್ ಹಾಕಿಕೊಂಡು, ಖಾಕೀಬಣ್ಣದ ಕೋಟು ಧರಿಸುತ್ತಾರೆ. ತಲೆಯ ಕೂದಲನ್ನು ಜುಟ್ಟದ ಹಾಗೆ ಸ್ವಲ್ಪ ಬಿಟ್ಟು, ಉಳಿದುದನ್ನು ಸಂಪೂರ್ಣ ಬೋಳುಮಾಡಿಸಿಕೊಳ್ಳುತ್ತಾರೆ. ಪುರುಷರು ತಮ್ಮ ತಲೆಗೆ ಯಾವಾಗಲೂ ಒಂದು ಕೆಂಪು ಅಥವಾ ಬಿಳೀ ರುಮಾಲನ್ನು ಸುತ್ತಿಕೊಳ್ಳುವದು ಗೊಂಡರಲ್ಲಿ ಮಾತ್ರವೇ ಕಾಣಸಿಗುವ ಪದ್ಧತಿ. ಈ ರುಮಾಲಿನ ಒಳಗೆ ಅಥವಾ ಹಾಕಿಕೊಂಡ ಕೋಟಿನ ಕಿಸೆಯಲ್ಲಿ ಗಂಡಸರು, ತಮ್ಮ ಸೀರೆಯ ವೊಟ್ಟೆಯಲ್ಲಿ ಹೆಂಗಸರು ಯಾವಾಗಲೂ ತಮ್ಮ ತಮ್ಮ "ಕವಳದ ಚಂಚಿ"ಯನ್ನು ಇಟ್ಟುಕೊಂಡಿರುತ್ತಾರೆ. ಗಂಡಸರು ಕಿವಿಯ ಕೆಳಭಾಗದಲ್ಲಿ ಬಂಗಾರದ ಮತ್ತು ಮೇಲ್ಭಾಗದಲ್ಲಿ ಬೆಳ್ಳಿಯ ಮುರುವು ಧರಿಸಿಕೊಂಡು ಎರಡೂ ಕೈಗೆ ಬೆಳ್ಳಿಯ ಕಡಗ ಹಾಕಿಕೊಳ್ಳುತ್ತಾರೆ. ಕೈಗೆ ಮಾತ್ರವಲ್ಲದೇ ಬಲಗಾಲಿಗೆ ಒಳೆಧರಿಸುವವರೂ ಇದ್ದಾರೆ.

ಸ್ತ್ರೀಯರು ತಲೆಗೆ-ಗೊಂಡರಲ್ಲಿ ಮಾತ್ರ ಕಾಣಸಿಗುವ-ಓರೆತುರುಬನ್ನು ಕಟ್ಟಿಕೊಂಡು ಕುತ್ತಿಗೆಗೆ ಸರ, ಕೈತುಂಬ ಗಾಜಿನ ಬಣ್ಣಬಣ್ಣದ ಬಳೆ, ಮೂಗಿಗೆ ನತ್ತು, ಕಿವಿಗೆ

ಕುಡುಕು, ಕಾಲಿಗೆ ಬೆಳ್ಳಿಯ ಉಂಗುರ ಧರಿಸಿ, ಸೀರೆ ಉಡುತ್ತಾರೆ. ರವಿಕೆ ತೊಡುವ ಪದ್ಧತಿಯೇ ಇವರಲ್ಲಿ ಇಲ್ಲವಾದರೂ ಉಟ್ಟುಕೊಂಡ ಸೀರೆಯನ್ನೇ ಕರಿಮಣಿಸರಕ್ಕೆ ಅಥವಾ ದಾರಕ್ಕೆ ಸಿಕ್ಕಿಸಿಕೊಂಡು ತಮ್ಮ ಸಂಪೂರ್ಣ ಮೈಮುಚ್ಚಿಕೊಳ್ಳಬಲ್ಲರು. ತಮ್ಮ ಪ್ರತ್ಯೇಕ ಸಂಸ್ಕೃತಿಯ ಪಡಿಯಚ್ಚನ್ನು ಉಳಿಸಿಕೊಳ್ಳಲು ಗೊಂಡರ ವಿಶಿಷ್ಟ ಉಡುಗೆ-ತೊಡುಗೆಗಳು ಸಹಾಯವಾಗುತ್ತವೆ.

ಉದ್ಯೋಗ-ಆಹಾರ : ಗೊಂಡರಲ್ಲಿ ಸುಶಿಕ್ಷಿತರು ತುಂಬ ಕಡಿಮೆ. ಈಗ ಮೂವರು ಎಸ್. ಎಸ್. ಎಲ್. ಸಿ. ಯಲ್ಲಿ ದ್ವಿತೀಯ ವರ್ಗದಲ್ಲಿ ಪಾಸಾಗಿ, ಇಬ್ಬರು ಭಟಕಳದ ಅಂಜೂಮನ್ ಕಾಲೇಜಿನಲ್ಲೂ, ಒಬ್ಬರು ಕುಮಟಾದ ಕಾಮರ್ಸ ಕಾಲೇಜಿನಲ್ಲೂ ಪಿ. ಯು. ಸಿ. ೧ನೇ ವರ್ಷದಲ್ಲಿ ಕಲಿಯುತ್ತಿದ್ದಾರೆ. ಇವರಿಗಿಂತ ಹೆಚ್ಚು ಕಲಿತ ಗೊಂಡರಿಲ್ಲ. ಎಸ್. ಎಸ್. ಎಲ್. ಸಿ. ವರೆಗೆ ಕಲಿತವರು ಬ್ಯಾಂಕು, ಸಹಕಾರೀ ಸಂಘಗಳಲ್ಲಿ ಚಿಕ್ಕಪುಟ್ಟ ನೌಕರಿಮಾಡುತ್ತಿದ್ದಾರೆ. ಎಸ್. ಎಸ್. ಎಲ್. ಸಿ. ವರೆಗೆ ಕಲಿತ ಕುಂಟವಾಣಿಯ ಸೋಮಯ್ಯ ಗೊಂಡರು ಭಟಕಳ ತಾಲೂಕಾ ಭೂನ್ಯಾಯ ಮಂಡಳಿಯ ಸದಸ್ಯರಾಗಿದ್ದಾರೆ. ತುಂಬ ನೇಮನಿಷ್ಠೆಯುಳ್ಳ ಗೊಂಡರು ಕೆಲಸ ಮಾಡುವದು ಬ್ರಾಹ್ಮಣರ ಮನೆಯಲ್ಲಿ ಮಾತ್ರ. ಪರಜಾತಿಯವರ ಮನೆಯಲ್ಲಿ ಗದ್ದೆ ಹೂಡರು, ನೀರನ್ನೂ ಕುಡಿಯರು. ತಮ್ಮ ಮನೆಗಳನ್ನು ಕಟ್ಟುವಾಗ ಮಣ್ಣಿನ ಗೋಡೆಯನ್ನು ಕಟ್ಟಿ, ಅದರ ಮೇಲೆ 'ಮುಳಿ'



ಗೊಂಡರ ಹಿರಿಯರನ್ನು ಲೇಖಕರು ಸಂದರ್ಶಿಸಿ ಮಾಹಿತಿ ಸಂಗ್ರಹಿಸುತ್ತಿರುವ

ಹುಲ್ಲನ್ನು ಹೊದೆಸುತ್ತಾರೆ. 'ಓಡಲಮನೆ' ಎಂದು ಇವರು ಕರೆಯುವ ಹಂಚಿನ ಮನೆಗಳು ಗೊಂಡರಲ್ಲಿ ಇಲ್ಲವೆಂದೇ ಹೇಳಬೇಕು. ಮನೆಯ ಮಾಡಿಗೆ ಹಾಕಿವ ಬಿದಿರಿನ ತೂತಿನಲ್ಲಿ ತರಕಾರಿ ಬೀಜಗಳನ್ನು ವರ್ಷಗಟ್ಟಲೆ ಕೆಡದಂತೆ ಇಡಬಹುದು. ಈ ಬಿದಿರಿನ ತೂತುಗಳಲ್ಲಿ ಹಣವನ್ನು ಕೂಡಿಟ್ಟರೆ ಯಾವ ಆದಾಯ ತೆರಿಗೆ ಅಧಿಕಾರಿಯ ಊಹೆಗೂ ಸಿಗಲಿಕ್ಕಿಲ್ಲ!

ಇರುವ ೪೮೬ ಕುಟುಂಬಗಳ ಪೈಕಿ ೩೨೬ ಕುಟುಂಬಗಳು ಕೃಷಿಯನ್ನೇ ತಮ್ಮ ಪ್ರಧಾನ ಉದ್ಯೋಗವನ್ನಾಗಿ ಮಾಡಿಕೊಂಡಿವೆ. ಕೃಷಿಗೆ ಅನುಕೂಲವಾಗುವಂತೆ ಇವರು ನೀರು ಇರುವೆಡೆಗಳಲ್ಲಿ ಅಂದರೆ ಹೊಳೆ-ಹಳ್ಳಗಳ ದಂಡೆಯ ಮೇಲೆ ಮನೆ ಕಟ್ಟಿಕೊಂಡು ವಾಸಿಸುತ್ತಾರೆ. ಬಿಡುವಿನಲ್ಲಿ ಸ್ತ್ರೀಯರು ನೇಯುವ 'ಮುಂಡಕಿನ' ಎಂಬ ಹುಲ್ಲಿನ ಚಾಪೆಗಳು ವಿವಿಧ ಅಳತೆಗಳಲ್ಲಿ ಅಂದವಾಗಿರುತ್ತವೆ. ಸುಮಾರು ೫ ಅಡಿ ಉದ್ದ ೨½ ಅಡಿ ಅಗಲದ ಚಾಪೆಯನ್ನು ಸತತವಾಗಿ ಹೆಣೆಯಲು ಎರಡು ಪೂರ್ತಿ ದಿನಗಳು ಬೇಕಂತೆ. ಮುಂಡಕಿನ ಹುಲ್ಲನ್ನು ದೂರದ ಕಾಡಿಗೆ ಕಲ್ಲು-ಮುಳ್ಳು ಚುಚ್ಚಿಸಿಕೊಂಡು ಹೋಗಿ ತರಬೇಕು. ಆದರೂ ಈ ಚಾಪೆಯ ಬೆಲೆ ಕೇವಲ ರೂಪಾಯಿ ನಾಲ್ಕು ಮಾತ್ರ! ಆ ಬೆಲೆಯ ಬಗೆಗೂ ಚೌಕಶಿ ಮಾಡಿ ಇನ್ನೂ ಕಡಿಮೆ ಬೆಲೆಗೆ ಕೊಳ್ಳುವ ಬುದ್ಧಿವಂತ (!) ಗಿರಾಕಿಗಳೂ ಇದ್ದಾರೆ. ತಮ್ಮ ದುಡಿತದ ಬೆಲೆ ಗೊತ್ತಿರದ ಗೊಂಡರ ಇಂತಹ ಅವಸ್ಥೆ ನೋಡಿ ಕನಿಕರವೆನಿಸುತ್ತದೆ.

ತಮ್ಮ ತೋಟಗಳಲ್ಲಿ ಬೆಳೆದ ಅಡಿಕೆ, ಹಸಿಮೆಣಸು, ಚೂರುಮೆಣಸು, ಅನಾನಸು, ಕೆಸುವು, ಪರಂಗಿ, ಬಾಳೇ ಕಾಯಿ, ವೀಳ್ಯದೆಲೆ ಅಲ್ಲದೇ ತುಪ್ಪವನ್ನು ರವಿವಾರ ನಡೆಯುವ ಶಿರಾಲಿಯ ಸಂತೆಗೆ ತಂದು ಇವರು ಮಾರಾಟ ಮಾಡುತ್ತಾರೆ. ಕೋಳಿ ಸಾಕಾಣಿಕೆಯೂ ಇವರಲ್ಲಿದೆ. ಆದ್ದರಿಂದ ಕೆಲವೊಮ್ಮೆ ಸಂತೆಗೆ ಕೋಳಿ, ತತ್ತಿಗಳನ್ನೂ ತಂದು ಮಾರಾಟ ಮಾಡುತ್ತಾರೆ.

ಗೊಂಡರ ಮುಖ್ಯ ಆಹಾರ ಅನ್ನ-ಗಂಜಿ. ಬಿದಿರಿನ ಬೀಜ ಬೇಯಿಸಿ ತಿನ್ನುವ ಬಡವರೂ ಇದ್ದಾರೆ. ತಾಳೇಹಿಟ್ಟನ್ನು ಆಹಾರವಾಗಿ ಬಳಸುತ್ತಾರೆ. ಶನಿವಾರ, ಸೋಮವಾರ ಇವು ಗೊಂಡರಿಗೆ 'ದೇವರ ದಿನ'ಗಳಾದ್ದರಿಂದ ಆ ಎರಡು ದಿನ ಬಿಟ್ಟು ಉಳಿದ ಎಲ್ಲ ದಿನ ಮಾಂಸ ತಿನ್ನುತ್ತಾರೆ. ಮೀನು, ಹಂದಿಯ ಮಾಂಸ ಬಿಟ್ಟು ಬೇರಾವ ಮಾಂಸ ತಿನ್ನುವದಿಲ್ಲ. ಮದ್ಯಪಾನವನ್ನು ಈ ಹಿಂದೆ ಗೊಂಡರ ಪಂಚಾಯತಿಯ ತೀರ್ಮಾನದ ಪ್ರಕಾರ ನಿಷೇಧಿಸಲಾಗಿತ್ತು. ಆದರೆ ಈಗ ಅದನ್ನು ಸಡಿಲಿಸಲಾಗಿದೆ.

೪. ಸಮಾಜದ ನ್ಯಾಯಾಂಗ

ಇತರ ಒಕ್ಕಲಿಗ ಸಮಾಜಗಳಲ್ಲಿರುವಂತೆ ಗೊಂಡರಲ್ಲಿಯೂ ಜಾತಿಯ ಕಟ್ಟುಸಿಟ್ಟು ಬಹಳವಾಗಿದೆ. ಗೊಂಡರಲ್ಲಿ ಎರಡು ಬೇರೆ ಬೇರೆ ಸೀಮೆಗಳಿವೆ. ಶಿರಾಲಿಯ ಬಳಿ ಠಾರಿ

ಯುವ ವೆಂಕಟಾಪುರ ಹೊಳೆಯ ಉತ್ತರಕ್ಕಿರುವ ಗೊಂಡರು ಒಂದು ಸೀಮೆಯವರಾದರೆ. ಹೊಳೆಯ ದಕ್ಷಿಣಕ್ಕಿರುವವರು ಇನ್ನೊಂದು ಸೀಮೆಯವರು. ಹೊಳೆಯ ದಕ್ಷಿಣಭಾಗ ದವರಿಗೆ ಮಾರುಕೇರಿಯ ಗೊಂಡನು ಸೀಮೆಗೊಂಡನಾದರೆ, ಹೊಳೆಯ ಉತ್ತರದವರಿಗೆ ಹೆಗ್ಗದ್ದೆ ಊರಿನ ಸೀಮೆಗೊಂಡ ನಿದ್ದಾನೆ. ಇತ್ತೀಚೆಗೆ ಗೊಂಡರ ಜನಸಂಖ್ಯೆ ಹೆಚ್ಚಿದಂತೆ ಅವರ ಸೀಮೆಗಳೂ ಹೆಚ್ಚಾಗುತ್ತಿದ್ದು ಸೀಮೆಗೊಂಡರೂ ಹೆಚ್ಚುತ್ತಿದ್ದಾರೆ. ತಮ್ಮ ಪ್ರದೇಶದ ಗೊಂಡ ಜನಾಂಗದ ಮುಖ್ಯಸ್ಥನಿಗೆ 'ಗೊಂಡ' ಎಂಬ ಶಬ್ದದಿಂದ ಕರೆಯುತ್ತಾರೆ. ಸೀಮೆಯ ಗೊಂಡನು ಆ ಸೀಮೆಯ ಗೊಂಡರಿಗೆಲ್ಲ ಅರಸ ನಿದ್ದಂತೆ. ಈ ಸೀಮೆಗೊಂಡತನ ವಂಶಪರಂಪರಾಗತವಾದದ್ದು. ತನ್ನ ಅಧಿಕಾರವ್ಯಾಪ್ತಿಯಲ್ಲಿರುವ ಸೀಮೆಗೊಂಡರಲ್ಲಿನ ವಿವಾದ ಗಳ ಪೂರ್ಣ ನ್ಯಾಯನಿರ್ಣಯದ ಅಧಿಕಾರ ಈ ಗೊಂಡನದು. ಜಾತಿಯ ನಿಯಮಗಳನ್ನು ಮುರಿದವರಿಗೆ ಜಾತಿಯಿಂದ ಹೊರಹಾಕುವ ('ಜಾತಿಕಟ್ಟು') ಅಧಿಕಾರ ಈತನಿಗಿದೆ. ಹೀಗೆ 'ಜಾತಿಕಟ್ಟು' ಆದವನಿಗೆ ಗೊಂಡ ಹೇಳಿದಷ್ಟು ಹಣ 'ದಂಡ' ತೆತ್ತು ಪಂಚಗವ್ಯ ಪಡೆದು ಶುದ್ಧನಾದ ಮೇಲೆಯೇ ಜಾತಿಗೆ ಪುನಃ ಪ್ರವೇಶ.

ಪ್ರತಿ ಊರಿನಲ್ಲಿಯೂ ಊರಿಗೆ ಒಬ್ಬ ಮುಖ್ಯ ಗೊಂಡ ನಲ್ಲದೇ, ಕೋಲುಕಾರ, ಬುದ್ಧಿವಂತ ಇರುತ್ತಾರೆ. ಇವರು ಕೆಲವು ಪರಿಮಿತವಾದ ಅಧಿಕಾರ ಪಡೆದು ಸೀಮೆಗೊಂಡನ ಅಧೀನರಾಗಿ ಕೆಲಸ ಮಾಡುತ್ತಾರೆ. ಆದರೆ ಊರಿನ

ಗೊಂಡನು ಮದುವೆ, ದೇವಕಾರ್ಯ ಇತ್ಯಾದಿ ವಿಶೇಷ ದಿನಗಳಲ್ಲಿ ಸ್ವಲ್ಪ ಹಣ ಮತ್ತು ವೀಳ್ಯ (ವೀಳ್ಯದೆಲೆ+ ಅಡಿಕೆ) ಸಹಿತವಾದ ಆಮಂತ್ರಣ ಪಡೆದು ಗೌರವದಿಂದ ನಡೆಸಿಕೊಳ್ಳಲ್ಪಡುವನಾದರೂ, ಅವನೂ ಸಹ ಗೊಂಡ ಸಮಾಜದ ಕಟ್ಟು ಕಟ್ಟಳೆಗಳಿಂದ ತಪ್ಪಿಸಿಕೊಳ್ಳಲಾರ. ಒಂದು ಘಟನೆ ಇದಕ್ಕೆ ನಿದರ್ಶನ. ಒಮ್ಮೆ ಒಂದು ಊರಿನ ಗೊಂಡನ ಹೆಂಡತಿ ಯಾರ ಸಂಗಡವೋ ಸಾರಾಯಿ ಕುಡಿದಳು. ಇದನ್ನು ಯಾರೋ ನೋಡಿ ಗೊಂಡರ ಸಭೆ ಕರೆದು ಆಕ್ಷೇಪ ಎತ್ತಿದರು. ಆಗ ಆ ಊರ ಗೊಂಡನು ತನ್ನ ಹೆಂಡತಿಗೆ ಯೋಗ್ಯ 'ದಂಡ' ವಿಧಿಸಿ ಆ ಹಣವನ್ನು ತಾನೇ ತೆತ್ತನು. ಈ ನಿದರ್ಶನದಿಂದ ಗಿರಿಜನಾಂಗದ ಗೊಂಡರು ಸಹಜವಾಗಿ ಸರಿಸಮಾನ ಭಾವನೆಯನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡಿರುವದನ್ನು ತಿಳಿಯಬಹುದಾಗಿದೆ.

ಗೊಂಡರಲ್ಲಿನ ವಿಧಿ – ನಿಷೇಧಗಳು ಹಲವಾರು. ಗೊಂಡರು ಶೇಂದಿ, ಸರಾಯಿ, ಕಳ್ಳು ಇತ್ಯಾದಿ ಮಾದಕ ಪಾನೀಯಗಳನ್ನು ಸೇವಿಸಬಾರದು, 'ಕ್ರಾಪ್' ಬಿಡಬಾರದು, ಇದಕ್ಕೆ ತಪ್ಪಿದರೆ 'ದಂಡ' ತಪ್ಪಿದ್ದಲ್ಲ. ಸಾಯಿಕಲ್ ಹತ್ತಿದರೂ ಮೊದಲು ದಂಡ ತೆರಬೇಕಾಗಿತ್ತಂತೆ. ಗೊಂಡರು ತಲೆಯ ಮೇಲೆ ಹಂಚನ್ನು ಹೊರಬಾರದು. ಸೀಮೆಯ-ಸುಣ್ಣಗಳನ್ನು ಹೊರುವದೂ ಹೀನವಂತೆ. ಮೊದಲು ಹೊರುತ್ತಿರಲಿಲ್ಲವಾದರೂ ನಾಗರಿಕತೆಯ ಬಿಸಿ ತಟ್ಟಿದಂತೆ ಈಗ ಈ ಮೇಲಿನ ಎಲ್ಲ ನಿಯಮಗಳೂ ಸಡಿಲಗೊಳ್ಳುತ್ತಿವೆ. ಗೊಂಡರು ತಮ್ಮ

ತಮ್ಮವರ ಮನೆ, ಬಚ್ಚಲು ಮನೆಗಳನ್ನು ಹೊದೆಯಿಸುವರೇ ವಿನಹ ಪರಜಾತಿಯವರ ಮನೆ ಹೊದೆಸುವದಿರಲಿ, ಮಾಡನ್ನೂ ಹತ್ತುವದಿಲ್ಲ. ಬ್ರಾಹ್ಮಣರ ಮನೆಯಲ್ಲೇ ದನ, ಎಮ್ಮೆಗಳಾದಿ ಜಾನುವಾರುಗಳು ಸತ್ತುಬಿದ್ದರೆ ಶವವನ್ನು ಕೊಟ್ಟಿಗೆಯಿಂದ ಹೊರಗೆ ತೆಗೆದುಹಾಕಲೂ ಸಹ ಅವರು ತಯಾರಾಗುವದಿಲ್ಲ. ಪರಜಾತೀ ಮನೆಯಲ್ಲಿ ಯಾರಾದರೂ ಸತ್ತರೆ ಆ ದಿನ ಅಂತಹವರ ಮನೆಗೂ ಹೋಗರು. ಗೊಂಡರು ಬೇರೆ ಜಾತಿಯವರ ಮನೆಯನ್ನು ಸೆಗಣಿಯಿಂದ ಸಾರಿಸರು (ಬ್ರಾಹ್ಮಣರ ಮನೆ ಮಾತ್ರ ಇದಕ್ಕೊಂದು ಅಪವಾದ), ಪಾತ್ರೆ ತೊಳೆಯರು, ಕಸ ತೆಗೆಯುವದಿಲ್ಲ. ಬ್ರಾಹ್ಮಣರ ಮನೆಯಲ್ಲಿ ಪಾಯಸಾದಿ ಕಜ್ಜಾಯ ಬಡಿಸಿಕೊಟ್ಟರೆ ಅದನ್ನು ಮನೆಗೆ ಕೊಂಡು ಹೋಗದೆ, ಅಲ್ಲಿಯೇ ಕುಡಿಯುತ್ತಾರೆ. ಗಂಡಸರು ಊಟಕ್ಕೆ ಕುಳಿತಾಗ ಮೊದಲು ರುಮಾಲನ್ನು ತೆಗೆಯುತ್ತಿರಲಿಲ್ಲವಂತೆ. ಆದರೆ, ಈಗ ಸಾಮಾನ್ಯವಾಗಿ ಊಟಕ್ಕೆ ಕುಳಿತುಕೊಳ್ಳುವಾಗ ಗೊಂಡರು ರುಮಾಲನ್ನು ಬಿಚ್ಚಿಡುತ್ತಾರೆ. ಗೊಂಡರೆಂದರೆ ತುಂಬ ಪ್ರಾಮಾಣಿಕರು. ಉದಾಹರಣೆಗೆ- ಗೊಂಡರ ಬಳಿ ನೀವು ಹಾಲು ಕೊಳ್ಳಲು ಪ್ರಾರಂಭಿಸಿದರೆ ಕೊನೆಯವರೆಗೂ ನಿಮಗೆ ಪರಿಶುದ್ಧ ಹಾಲು ಲಭ್ಯ. ಇಂತಹ ಕಟ್ಟುನಿಟ್ಟಿನ ಸಂಪ್ರದಾಯಗಳಿಂದಾಗಿ ಇವರು ಕೋರ್ಟು-ಕಛೇರಿಗೆ ತೆರಳುವದು ಕಡಿಮೆಯಾದರೂ, ೧೯೭೪ರ ಕರ್ನಾಟಕ ಭೂ ಸುಧಾರಣಾ ಕಾನೂನು ಗೊಂಡರಲ್ಲಿ ಕೆಲವರನ್ನು ಕೋರ್ಟು-ಕಛೇರಿಗಳ ಮೆಟ್ಟಲು ಹತ್ತಿಸುತ್ತಿದೆ.

೫. ಧಾರ್ಮಿಕ ವಿಧಿಗಳು

ಗೊಂಡರ ವರ್ಷ ಸ್ವಲ್ಪ ಬೇರೆಯಾಗಿದೆ. ಅವರ ವರ್ಷ ಆರಂಭವಾಗುವದು ದೀಪಾವಳಿಯ ತೈಲಾಭ್ಯಂಜನದ ದಿನದಿಂದ. ಮುಂದಿನ ದೀಪಾವಳಿಯ ಮೊದಲು ಬರುವ ಕೊಡಿ ತಿಂಗಳು ಮುಗಿಯುವಾಗ ಅವರ ಒಂದು ವರ್ಷ ಮುಗಿಯುತ್ತದೆ. ಅವರ ತಿಂಗಳುಗಳಿಗೆಲ್ಲ ಮೂವತ್ತು ದಿನಗಳಿದ್ದು, ಆ ತಿಂಗಳುಗಳ ಹೆಸರುಗಳು ಇಂತಿವೆ:-

೧. ದೀವಳ್ಳಿ (ದೀಪಾವಳಿ) ತಿಂಗಳು
೨. ಹಂಜೋಳ ತಿಂಗಳು
೩. ಭಾರತ ತಿಂಗಳು
೪. ಸುಗ್ಗಿ ತಿಂಗಳು
೫. ಕಿರಿಸುಗ್ಗಿ ತಿಂಗಳು
೬. ಹಗ್ಗ ತಿಂಗಳು
೭. ಬ್ಯಾಸಿ (ಬೇಸಿಗೆ) ತಿಂಗಳು
೮. ಕಾರ ತಿಂಗಳು
೯. ಆಶಾಢಿ ತಿಂಗಳು
೧೦. ಶೋಣಿ (ಶ್ರಾವಣ) ತಿಂಗಳು
೧೧. ಮಾಗ ತಿಂಗಳು
೧೨. ಕೊಡಿ ತಿಂಗಳು

ಇವುಗಳಲ್ಲಿ ಎರಡನೆಯ ಹಂಜೋಳ ತಿಂಗಳು, ಮೂರನೆಯ ಭಾರತ ತಿಂಗಳು, ಆರನೆಯ ಹಗ್ಗು ತಿಂಗಳು ಮತ್ತು ಏಳನೆಯ ಬ್ಯಾಸಿ ತಿಂಗಳಿನಲ್ಲಿ ಗೊಂಡರ ಹಬ್ಬಗಳಿಲ್ಲ.

ಅವರಿಗೆ ದೀಪಾವಳಿ ಬಹಳ ದೊಡ್ಡ ಹಬ್ಬ. ಉಳಿದ ಹಿಂದೂಗಳಂತೆ ಮೈತುಂಬ ಎಣ್ಣೆ ಹಚ್ಚಿಕೊಂಡು ಸ್ನಾನ ಮಾಡುವದು ಇವರಿಗೂ ವಿಶೇಷವೇ. ಬಲೀಂದ್ರನ ಪೂಜೆಯಲ್ಲಿ ಮೊಗೆಕಾಯಿ, ಹಿಂಡ್ಲಕಾಯಿ, ವೀಳ್ಯ, ಹಣ್ಣು-ಕಾಯಿ ಇಟ್ಟು ಪೂಜೆಮಾಡುತ್ತಾರೆ. ಕೃಷಿ ಫಲಗಳ ಈ ಪೂಜೆಯನ್ನು ನೋಡಿದರೆ ಬಲೀಂದ್ರನ ಪೂಜೆ ಎನ್ನುವದು ಕೃಷಿದೇವತೆಯ (Goddess of Cornceres) ಪೂಜೆಯಂತೆ ತೋರುತ್ತದೆ. ಬೆಳೆ ಬರುವ ಸಮಯದಲ್ಲಿನ ಬಲೀಂದ್ರನ ಆಗಮನವೂ ಇದನ್ನೇ ಸೂಚಿಸುತ್ತದೆ.

ದೀಪಾವಳಿಯಲ್ಲಿ ಗೊಂಡರು ಒಂದು ದಿನ ದೋಸೆಯನ್ನೂ, ಇನ್ನೊಂದು ದಿನ ‘ನೀರುಬ್ಬೆ’ (ಕುದಿದ ನೀರ ಕಡಬು) ಎಂಬ ಅಕ್ಕಿಯ ಕಜ್ಜಾಯವನ್ನೂ ಮಾಡಿಕೊಂಡು ತಿನ್ನುತ್ತಾರೆ. ದೀಪಾವಳಿಯ ನಂತರ ಎತ್ತು, ಕೋಣ, ಎಮ್ಮೆಗಳ ಪೂಜೆಮಾಡಿ ಅವನ್ನು ಮೀಯಿಸಿ, ಸಿಂಗರಿಸಿ, ಶೇಡಿ ಬಳೆದು, ಹೂಹಾಕಿ ಪೂಜೆಮಾಡಿ, ಕೊಟ್ಟಿಗೆಯಿಂದ ಹೊರಗೆ ಬಿಟ್ಟು "ಹೋ, ಹೋ," ಎಂದು ಕೂಗುವ ‘ಗಂಟಿಹಬ್ಬ’ ಆಚರಿಸುತ್ತಾರೆ. ತುಳಸೀ ಪೂಜೆ ಗೊಂಡರಲ್ಲಿ ಇತ್ತೀಚೆಗೆ ರೂಢಿಯಾಗುತ್ತಿದೆ. ಇದು ನೆರೆಹೊರೆಯ ಮುಂದುವರಿದ ಸಮು

ದಾಯಗಳು ಗೊಂಡರ ಸಂಸ್ಕೃತಿಯ ಮೇಲೆ ಬೀರಿದ ಪ್ರಭಾವದ ನಿದರ್ಶನ.

ಸುಗ್ಗಿ ತಿಂಗಳಿನಲ್ಲಿಯಾಗಲಿ, ಮುಂದಿನ ಕಿರಿಸುಗ್ಗಿ ತಿಂಗಳಿನಲ್ಲಿಯಾಗಲಿ ಬರುವ ಶಿವರಾತ್ರಿಯು ಗೊಂಡರಿಗೆ ದೊಡ್ಡ ಹಬ್ಬ. ಮಾರುಕೇರಿಯಲ್ಲಿ ಆ ದಿನ ಮಾರುಕೇರಿಯ ಹೆಬ್ಬಾರರು ದೇವಸ್ಥಾನದಲ್ಲಿ ತೆಂಗಿನಕಾಯಿಯನ್ನೊಡೆದು ಅಲ್ಲಿಯ ಗೊಂಡರಿಗೆ ಅದನ್ನು 'ಪ್ರಸಾದ' ಎಂದು ನೀಡುತ್ತಾರೆ. ಶಿವರಾತ್ರಿಯ ಸುಗ್ಗಿ ಕುಣಿತವು ಗೊಂಡರ ವಿಶಿಷ್ಟ ಜಾನಪದ ನರ್ತನ; ಇದು ಗೊಂಡರ ಕುಣಿತ. ಶಿವರಾತ್ರಿಯ ಮಧ್ಯ ರಾತ್ರಿಯಿಂದ ಆರಂಭಿಸಿ ಎರಡು ಪೂರ್ತಿ ದಿನ ಮನೆಮನೆಗೆ ಹೋಗಿ ಢಕ್ಕೆ ಬಡಿಯುತ್ತಾ ಕುಣಿಯುತ್ತಾರೆ. ಆಗ ಪದ ಹೇಳುವದೂ ಉಂಟು. ಕುಣಿತದಲ್ಲಿ ಕೋಲಾಟ ಇಲ್ಲ. ಢಕ್ಕೆ ಹಿಡಿದುಕೊಂಡು ಬಡಿಯುತ್ತಾ ಕುಣಿಯುವದೇ ಅವರ ಕೆಲಸ. ಹೂವಿನ ತಲೆದೊಡಿಗೆ ಧರಿಸಿ ಶುಭ್ರವಾದ ಬಿಳಿಯ ಮುಂಡು ಮತ್ತು ಕೋಟನ್ನು ಧರಿಸಿರುತ್ತಾರೆ.

ಕುಣಿತದವರ ಜೊತೆಗೆ ಸಾಮಾನ್ಯವಾಗಿ ಇಬ್ಬರು ಕಾಮಣ್ಣರು ಬರುತ್ತಾರೆ. (ಹನುಮಂತನ ವೇಷವಿರುವದಿಲ್ಲ) ಈ ಕಾಮಣ್ಣರು 'ಕಾಮನ ಅಂಗಿ' ಎಂಬ ಉದ್ದವಾದ ನಿಲುವಂಗಿ ಧರಿಸಿರುತ್ತಾರೆ. ಅಂಗಿಗೆ ಆನೆಯ ಮುಖವಾಡ ವಿರುತ್ತದೆ. ಮೂಗು ಗರುಡನ ಮೂಗಿನ ಹಾಗೆ ಉದ್ದವಿದ್ದು ಇಳಿದಿರುತ್ತದೆ. ಮೋರೆಗೆ ಕಪ್ಪು ಬಣ್ಣ ಹಚ್ಚಿಕೊಂಡಿರು

ತ್ತಾರೆ. ಕೈಯಲ್ಲಿ 'ಕಾಮನಜಲ್ಲಿ' ಎಂಬ ಕಟ್ಟಿಗೆಯ ಕತ್ತಿಯಂತಹ ಉದ್ದವಾದ ಆಯುಧವನ್ನು ಹಿಡಿದಿರುತ್ತಾರೆ. ಕುಣಿತ ಮುಗಿಯುವಾಗ 'ಕಾಮನಂಗಿ' ಯವರು ದೂರದಿಂದ ಓಡಿಬಂದು ಹಣ ಸಂಗ್ರಹಿಸುತ್ತಾರೆ.

ಕುಣಿತದವರು ದೇವರ ಹೆಸರು ಹೇಳಿ 'ದುಮುಸಾಲೆ' ಎನ್ನುತ್ತಾ ಹೊಗಳುತ್ತಾರೆ. ಶಿವರಾತ್ರಿಯಾದ ಮೇಲೆ ಹೋಳಿ ಹುಣ್ಣಿಮೆಯವರೆಗೆ ಢಕ್ಕೆಯನ್ನು ಬಡಿಯುತ್ತಾರೆ. ಆಮೇಲೆ ಕೋಂಗತಿ ಕಟ್ಟೆಯ ಮಾಸ್ತಿ ಹಬ್ಬದ ವರೆಗೆ ಢಕ್ಕೆ ಬಡಿಯುವಂತಿಲ್ಲ.

ಎಂಟನೆಯ 'ಕಾರ' ತಿಂಗಳಿನಲ್ಲಿ 'ಮಾರಿಹಬ್ಬ' ಮಾಡುತ್ತಾರೆ. ಈ ಹಿಂದೆ ಭಟಕಳದ ಮಾರೀ ಕಟ್ಟೆಯಲ್ಲಿರುವ ಮಾರೀ ಗುಡಿಯಲ್ಲಿ ಆ ದಿನ ಕುರಿ-ಕೋಳಿಗಳ ಬಲಿ ನೀಡುತ್ತಿದ್ದರಂತೆ. ಆದರೆ, ಈಗ ಕರ್ನಾಟಕ ಸರ್ಕಾರ ಮಾರೀ ಹಬ್ಬದಲ್ಲಿ ಇಂತಹ ರಕ್ತಪಾತವನ್ನು ನಿಷೇಧಿಸಿದ್ದರಿಂದ ಈ ಮೂಕ ಪ್ರಾಣಿಗಳೆಷ್ಟೋ ಉಳಿದುಕೊಳ್ಳುವಂತಾಗಿದೆ! ಹತ್ತನೆಯ ಶೋಣಿ (ಶ್ರಾವಣ) ತಿಂಗಳಿನಲ್ಲಿ ಸಂಕ್ರಾಂತಿ ಹಬ್ಬವಿದೆ.

ಶೋಣಿ ತಿಂಗಳ ಸಂಕ್ರಾಂತಿಯ ದಿನ ಭತ್ತದ ಗದ್ದೆಗಳಲ್ಲಿ ಗೊಂಡರು "ನಸುಕಾಗುವದರೊಳಗೆ– ಬೆಳಗಿನ ಜಾವದಲ್ಲಿಯೇ" ಮುಂಡಕಿನ ಗಿಡ ನೆಟ್ಟು ಬರುತ್ತಾರೆ. ಭತ್ತದ ಸಸಿಗಳ ಗಂಡಸೆಂದು ತಿಳಿಯಲಾದ 'ಮುಂಡಕಿನ' ಎಂಬ

ಕೇದಗೆಯ ಗಿಡದಂತಹ ಜಾತಿಯ ಗಿಡವೇ ಭತ್ತದ ಸಸಿಗಳು ಗರ್ಭಧರಿಸಲು ಕಾರಣವಂತೆ. ಹೀಗಾಗಿ ಈ ಗಂಡನನ್ನು ಪಡೆದ ನಂತರವೇ ಭತ್ತದ ಸಸಿಗಳು ಹೊಡೆಬಿಡುವವಂತೆ!

'ಕೊಡಿ' ತಿಂಗಳಿನ ಕೊನೆಯ ಅಮಾವಾಸ್ಯೆಗೆ 'ಕೊಡಿನ ಮಾಸೆ' ಎನ್ನುತ್ತಾರೆ. ಆ ದಿನ ತಿರುಪತಿ ತಿಮ್ಮಪ್ಪ ದೇವರಿಗೆ ಪೂಜೆ ಸಲ್ಲಿಸಿ ಊಟಮಾಡುತ್ತಾರೆ. ಪೂಜಿಸುವವರು ಬ್ರಾಹ್ಮಣ ಪುರೋಹಿತರಲ್ಲ, ಗೊಂಡರೇ. ಊರಿನ ಮುಖಂಡ ಗೊಂಡನೂ, ಸೀಮೆಗೊಂಡನೂ ಪುರೋಹಿತನ ಕೆಲಸ ನಿರ್ವಹಿಸುತ್ತಾರೆ.

ತಿರುಪತಿ ತಿಮ್ಮಪ್ಪನ ಭಕ್ತರಾದ ಗೊಂಡರು ಶನಿವಾರದಂದು ಉಪವಾಸ,ಪೂಜೆ ಇತ್ಯಾದಿ ನಡೆಸುತ್ತಾರೆ. ಅನೇಕರು ತಿರುಪತಿ ಯಾತ್ರೆ ಮುಗಿಸಿಬಂದು, 'ಹರಿದಿನ' ಮಾಡಿ ತಮ್ಮ ಊರ-ಪರಊರ ಗೊಂಡ ಜಾತಿಯವರನ್ನೆಲ್ಲ ಕರೆದು ಪಾಯಸದೂಟ ಬಡಿಸುತ್ತಾರೆ. ಆ ದಿನ ರಾತ್ರಿ ಗಂಡಸರು "ತಂದನಾ ತಾನss" ಪದಗಳನ್ನು ಹೇಳಿ ಮನರಂಜಿಸುತ್ತಾರೆ. ಹರಿದಿನದ ಪದಗಳೆಂಬ ವಿಶಿಷ್ಟ ಪದಗಳೂ ಉಂಟು–ಅವನ್ನೂ ಹಾಡುತ್ತಾರೆ. ತಿರುಪತಿಗೆ ಹೋಗಿಬಂದ 'ದಾಸಿಗಳು' ಮಾತ್ರವೇ ಈ ಪದ ಹೇಳುತ್ತಾರಂತೆ. ಈ ಪದಗಳಲ್ಲಿ ಪ್ರತಿ ಸಾಲಿನ ಕೊನೆಯಲ್ಲಿ "ಹೌದೋರಣ್ಣನ ಗೋವಿಂದ" ಎನ್ನುತ್ತಾರೆ.

ತಿರುಪತಿ ತಿಮ್ಮಪ್ಪನ ಮಹಾಭಕ್ತರಾದ ಗೊಂಡರಿಗೆ ಒಮ್ಮೆ ತಿರುಪತಿಗೆ 'ಯಾತ್ರೆ' ಮಾಡಿ ಬಂದರೆ ಜೀವನದಲ್ಲಿ ಒಂದು ದೊಡ್ಡ ಸಾಧನೆ ಮಾಡಿದಷ್ಟು ಹರ್ಷ! ಶನಿವಾರ ದಿನ ಒಂದೊಂದು ಮನೆಯಲ್ಲಿ ಒಬ್ಬೊಬ್ಬರಾದರೂ ಉಪವಾಸವಿರುತ್ತಾರೆ. ಉಳಿದವರಿಗೆ ಆ ದಿನ ಶಾಖಾಹಾರವೇ ಗತಿ-ಮಾಂಸ ವರ್ಜ್ಯ.

ತಿಮ್ಮಪ್ಪನನ್ನಲ್ಲದೇ ಧರ್ಮಸ್ಥಳದ ಮಂಜುನಾಥ, ಸಿರಸಿಯ ಮಾರಮ್ಮನವರೂ ಸಹ ಗೊಂಡರ ಪ್ರಿಯ ದೇವತೆಗಳು. ಸ್ಥಳೀಯ ದೇವರೆಂದರೆ ಅಳವೇಕೋಡಿಯ ದುರ್ಗಾ ಪರಮೇಶ್ವರಿ ಮತ್ತು ಕಡವಿನಕಟ್ಟೆಯ ಅಮ್ಮನವರು.

ಮಳೆಗಾಲ, ಚಳಗಾಲ ಮುಗಿದು ಬೇಸಿಗೆಗಾಲ ಸುರುವಾಯಿತೆಂದರೆ ಗೊಂಡರಿಗೆ ಪುರುಸೊತ್ತೇ ಇರುವದಿಲ್ಲ. ಗೊಂಡರಲ್ಲಿ ಮದುವೆ, ಹರಿದಿನ, ದೇವಕಾರ್ಯ ಇತ್ಯಾದಿ ಒಂದರ ಮೇಲೊಂದು ಬರುತ್ತವೆ. ಶನಿವಾರ ತಪ್ಪಿದರೆ ಸೋಮವಾರಗಳಲ್ಲಿ ಒಬ್ಬರ ಮನೆಯಲ್ಲಿ 'ದೇವಕಾರ್ಯ' ನಡೆಸಿ, ನೆರೆಯೂರ ನೆಂಟರನ್ನೂ, ಗೊಂಡರನ್ನೂ ಕರೆಯುತ್ತಾರೆ. ದೇವಕಾರ್ಯಕ್ಕೂ ಮೊದಲು ಆ ಊರಿನ ಗೊಂಡನು ಸತತವಾಗಿ ಮೂರು ದಿವಸ ಉಪವಾಸವಿದ್ದು ತಲೆಯ ಮೇಲೆ (ದೇವಕಾರ್ಯದ ದಿನ) ಒಂದು ನೀರು ತುಂಬಿದ ತಂಬಿಗೆಯ ಮೇಲೆ ತೆಂಗಿನಕಾಯಿ ಇರುವ 'ಕಲಶ'ವನ್ನು ಹೊರುತ್ತಾನೆ. ರಾತ್ರಿ ಗಂಡಸರು ಪದ ಹೇಳುತ್ತಾರೆ. 'ದೇವಕಾರ್ಯ'

ಅಲ್ಲದೇ ತಲಾ ೪ಆಣೆಯಂತೆ (೪ಆಣೆ=ಒಂದು ಚಕ್ರ) ದೇವರಿಗೆ ಕಾಣಿಕೆ ಹಾಕುವ 'ಚಕ್ರ ಕಟ್ಟುವದೂ' ರೂಢಿಯಲ್ಲಿದೆ. ಯಾವದೇ ಒಂದು ಮನೆಯಲ್ಲಿ ಇಂತಹ ದೇವಕಾರ್ಯಗಳು ನಡೆಯುವಾಗ, ಯಾರ ಮನೆಯಲ್ಲಿ ಆ ಕಾರ್ಯ ನಡೆಯುತ್ತದೋ, ಆ ಮನೆಯ ಯಜಮಾನನು ತನ್ನ ದಾಯಾದಿಗಳಲ್ಲಿ, ನೆಂಟರಿಪ್ಟರಲ್ಲಿ ಪಂತಿಗೆ ಎತ್ತಿ ಇಂತಹ ಕಾರ್ಯಗಳನ್ನು ನಡೆಸುತ್ತಾನೆ. ಹಾಗಾಗಿ ಈ ಕಾರ್ಯಗಳೆಲ್ಲ ಸಾಮೂಹಿಕವಾಗಿ ಆಗುವಂತವು ಎನ್ನಬಹುದು. ಈ ಪದ್ಧತಿ ಈ ಜನರಲ್ಲಿಯ ಸಾಮಾಜಿಕ ಐಕ್ಯತೆಯನ್ನು ಸೂಚಿಸುತ್ತದೆ. ಇಂತಹ 'ಕಾರ್ಯ' ಇರುವ ದಿನಗಳಲ್ಲಿ ಗೊಂಡ ಜಾತಿಯ ಎಲ್ಲರಿಗೂ ಸವಿಯೂಟವಿದೆ. ಆ ದಿನ ಗೊಂಡರು ಹೊಟ್ಟೆಬಿರಿಯುವಷ್ಟು ಊಟಮಾಡಿ ತೇಗುತ್ತಾರೆ. 'ದೇವಕಾರ್ಯ' ಇರುವ ದಿನಗಳಲ್ಲಿ ಗೊಂಡ ಸ್ತ್ರೀಯರು ಮನೆಗೆ "ಕೇಡಿ" ಬರೆಯುತ್ತಾರೆ. ಮನೆಯ ಮುಂದಿನ ಮಣ್ಣಿನ ತುಳಸಿಗೂ ಕೇಡಿ ಬರೆದು ಅಂದ-ಚೆಂದದ ಬಾಳೆಎಲೆ, ಬೇರೆ ಬೇರೆ ಹೂ ಇತ್ಯಾದಿ ಜಡಿಸಿ, ಮನೆಯನ್ನೂ ಮನೆಯ ಸುತ್ತಮುತ್ತಲನ್ನೂ ತೋರಣವಾಗಿಟ್ಟು ಒಪ್ಪಗೊಳಿಸುತ್ತಾರೆ. ಇವರ ದೇವರ ಕಾರ್ಯ ನಡೆಯುವದು ಕತ್ತಲೆಯಲ್ಲಿಯೇ ಎನ್ನಬಹುದು. ಯಾಕೆಂದರೆ ಈ ಕಾರ್ಯಗಳು ಸುರುವಾಗುವದು ಸಂಜೆ ೬ರ ನಂತರ–ಮುಗಿಯುವದು ರಾತ್ರಿ ಸುಮಾರು ೨ ಘಂಟೆಗೆ. ಬಡವರಾದ ಗೊಂಡರು ಲಾಟೀನು, ಕಂದೀಲುಗಳ ಬೆಳಕಿನಲ್ಲಿಯೇ ರಾತ್ರಿ ಕಳೆಯುತ್ತಾರೆ. ವಿದ್ಯುಚ್ಛಕ್ತಿ ಬಳಸಲು ಅವರಲ್ಲೆಲ್ಲಿ ಧನಶಕ್ತಿ !

ಹೋಳಿಹಬ್ಬದಲ್ಲಿ ಕಾಮನನ್ನು ಸುಡುವ ಸಂಪ್ರದಾಯವಿದ್ದರೂ, ಆ ದಿನದ ಗೊಂಡರ ಸುಗ್ಗಿ ಕುಣಿತ ಉತ್ತರ ಕನ್ನಡ ಜಿಲ್ಲೆಯ ಇತರೆಡೆಗಳಲ್ಲಿಯಂತೆ ಇಲ್ಲ. ಆ ದಿನ ಕಟ್ಟಿಗೆಯ ಮೇಲೆ ಹುಲ್ಲನ್ನು ಕೂಡ್ರಿಸಿ, ಕಟ್ಟಿಬೊಂಬೆಯ ಹಾಗೆ ಮಾಡಿ ಕೈಕಾಲು ರಚಿಸಿ, ಈ ಬೊಂಬೆಯ ಮೆರವಣಿಗೆ ಮಾಡುತ್ತಾರೆ. ಈ ಗೊಂಬೆಯ ಮೆರವಣಿಗೆಗೆ 'ಹಳಬನನ್ನೆಬ್ಬಿಸುವದು' ಎನ್ನುತ್ತಾರೆ. ಈ 'ಹಳಬ' ಪ್ರಾಚೀನ ಕಾಲದಲ್ಲಿ ಚಳಿಗಾಲದ ಪ್ರತೀಕವಾಗಿದ್ದನೋ ಏನೋ. ಚಳಿಗಾಲರಾಯನನ್ನು ಕೊಂದು ಯುವಕ ವಸಂತನನ್ನು ಕರೆತರುವ ಪದ್ಧತಿ ಜಗತ್ತಿನ ಅನೇಕ ಕಡೆ ಬಳಕೆಯಲ್ಲಿದೆ. ಹಳಬನನ್ನೆಬ್ಬಿಸುವ ಪದ್ಧತಿಯೂ ಇದನ್ನೇ ಹೋಲುತ್ತದೆ.

ಹಳಬ ಎರಡು ಪ್ರಕಾರದ್ದು. ಒಂದು ಹುಲ್ಲು ಹಳಬು, ಇನ್ನೊಂದು ಕೊಳ್ಳಿ ಹಳಬು. ಕೊಳ್ಳಿ ಹಳಬನ ಪ್ರಕಾರದಲ್ಲಿ ಕೊಳ್ಳಿ ಹೊತ್ತುಕೊಂಡು ಹೋಗಿ ಹಳಬನನ್ನು ಸುಡುತ್ತಾರೆ. ಹಳಬನನ್ನು ಏಳಿಸಿಕೊಂಡು ಮೆರವಣಿಗೆ ಹೊರಡುವ ಮೊದಲು ಢಕ್ಕೆಯ ಪೂಜೆ ಮಾಡುತ್ತಾರೆ. ಊರ ಮುಖಂಡ 'ಗೊಂಡನು' ಉಪವಾಸವಿದ್ದು ಪೂಜೆ ಮಾಡುತ್ತಾನೆ. ಢಕ್ಕೆ ಪೂಜೆಯ ಪದ ಹೇಳುವವರೇ ಬೇರೆ ಇರುತ್ತಾರೆ. ಅವರು ಈ ಸಮಯಕ್ಕೆ ಪದ ಹೇಳುತ್ತಾರೆ. ಬೇಸ(ಬೇಸಿಗೆ) ತಿಂಗಳಲ್ಲಿ ಗಡಿ ಪೂಜೆಗೆ 'ಗಡಿಬೋಗ' ಎಂದು 'ಕೋಳಿಬಲಿ' ಕೊಡುತ್ತಾರೆ. ಇಲ್ಲಿಂದ ಮುಂದೆ ಚಳಿಗಾಲ ಆರಂಭ.

೬. ವಿವಾಹ ವಿಧಿ-ವಿಧಾನಗಳು

ಗೊಂಡರಲ್ಲಿ ಹೆಣ್ಣು-ಗಂಡು ಪರಸ್ಪರ ನೋಡಿ ಒಪ್ಪಿ, ಮದುವೆಯಾಗುವಂತಿಲ್ಲ. ಪ್ರೇಮವಿವಾಹವಂತೂ ಕೇಳ ಕೂಡದು. ಮದುವೆಯಾಗುವಾಗ ಸಾಮಾನ್ಯವಾಗಿ ಹೆಣ್ಣು ೧೪ ವರ್ಷದವಳೂ, ಗಂಡು ೧೮ ವರ್ಷದವನೂ ಇರುತ್ತಾರೆ. ವಧುವಿಗೆ ೧೮ ವರ್ಷ, ವರನಿಗೆ ೨೧ ವರ್ಷ ಪ್ರಾಯವಾಗಿರ ಬೇಕೆಂಬ ಕೇಂದ್ರ ಸರ್ಕಾರದ ಇತ್ತೀಚಿನ ಕಾನೂನು ಇವರ ಮೇಲೆ ಏನೂ ಪರಿಣಾಮ ಬೀರಿಲ್ಲ. ಗಂಡಿನ ಮನೆಯವರೇ ಮುಂದಾಗಿ ಹೆಣ್ಣನ್ನು ಹುಡುಕಿಕೊಂಡು ಬರಬೇಕು. ಗಂಡು-ಹೆಣ್ಣಿನ ಹೆಸರುಗಳ ಆಧಾರದ ಮೆಲೆಯೇ ಜಾತಕ ತಯಾರಿಸಿ ಇಬ್ಬರ ಮೇಳಾ-ಮೇಳ ನೋಡುತ್ತಾರೆ. ಪುರೋ ಹಿತ (ಊರ ಗೊಂಡ)ನು ಬಂದು ಕುಳಿತು ಎರಡು ಮಾತು ಹೇಳಬೇಕು. ಈ ಸಂದರ್ಭದಲ್ಲಿ ಊರ ಗೊಂಡನಿಗೆ ವೀಳ್ಯ ನೀಡಿ ಲಗ್ನ ನಿಶ್ಚಯಿಸಲು ಆಮಂತ್ರಿಸಿ, ಗಂಡಿನವರು ಅತ ನನ್ನು ಕರೆದುಕೊಂಡು ಹೋಗಬೇಕು. ಜಾತಕವನ್ನು ನೋಡಿ, ತನ್ನ ಅಭಿಪ್ರಾಯ ಹೇಳಿ ಉಡುಗೊರೆ ತೆಗೆದು ಕೊಂಡು ಹೋಗುತ್ತಾನೆ. ಜಾತಕ ಹೊಂದದಿದ್ದರೂ ಗಂಡು ಹೆಣ್ಣಿನ ಕಡೆಯವರಿಗೆ ಒಪ್ಪಿಗೆಯಿದ್ದರೆ ಗೊಂಡನು ಹೇಳಿ ಕೂಡಿಬಂತೆಂದು ಮಾಡಿಸಿದರಾಯಿತು. ವಾಸ್ತವಾಂಶವೆಂದರೆ ಹೆಣ್ಣು-ಗಂಡಿನ ಹಿರಿಯರು ಪರಸ್ಪರ ಒಪ್ಪಿ, ಮದುವೆಯ ದಿನವನ್ನೂ ನಿಶ್ಚಯಿಸಿ, ಆ ಮೇಲೆ ಮದುವೆಯ ಮೊದಲ

ದಿನ ಪುರೋಹಿತನ ಬಳಿ ಜಾತಕ ತೋರಿಸುತ್ತಾರೆ. ಹೀಗಾಗಿ ಜಾತಕ ತೋರಿಸುವದು ಬರೇ ಒಂದು ಪದ್ಧತಿ ಮಾತ್ರ. ಮದುವೆಯನ್ನು ಸಾಗಿಸಲು ಬೇರೆ ಪುರೋಹಿತರಿಲ್ಲ-ಊರ ಗೊಂಡನೇ ಪುರೋಹಿತ. ಆವನಿಗೇ ಎಲ್ಲ ಉಡುಗೊರೆ ಇತ್ಯಾದಿ "ಪುರೋಹಿತ ಮರ್ಯಾದೆ" ಸಲ್ಲುತ್ತವೆ.

ಮದುವೆಯ ಕಾರ್ಯಕ್ಕೆ ಒಪ್ಪಿಗೆ ನೀಡುವವನು ಊರ ಗೊಂಡನಾದರೂ ದುಡ್ಡು ಸಲ್ಲುವದು ಸೀಮೆಗೊಂಡನಿಗಂತೆ. ಮದುವೆಯಲ್ಲಿ ಉಡುಗೊರೆಗಳು ಸೀಮೆಗೊಂಡನಿಗೂ, ಊರ ಗೊಂಡನಿಗೂ ಸಲ್ಲುತ್ತವೆ.

ಬೇರೆ ಜಾತಿಗಳಲ್ಲಿರುವಂತೆಯೇ ವರನ ತಲೆಕೂದಲು ಕತ್ತರಿಸುವ(ಕ್ಷೌರ) ಕಲಶದ ನೀರನ್ನು ಮೀಯಿಸುವ ಪದ್ಧತಿ ಗೊಂಡರಲ್ಲೂ ಉಂಟು. ವಧುವಿಗೂ ಕಲಶದ ನೀರಿನಿಂದ ಮೀಯಿಸುತ್ತಾರೆ. ಚಾದರ (ಹೊದೆಯುವ ವಸ್ತ್ರ) ದಂತಹ ವಸ್ತುವನ್ನೇ ವರನ ತಲೆಗೆ ಸುತ್ತುತ್ತಾರೆ. ರುಮಾಲಿನ ವಸ್ತ್ರದಲ್ಲೇ ಚೂಪಾಗಿ ಬರುವ ಹಾಗೆ ಮುಂಡಾಸು ಸುತ್ತುವ ಕ್ರಮ ಇದೆ. ಕೆಂಪು ಬಣ್ಣದ ಮಡಿಯನ್ನು ಮುಂಡಾಸದಂತೆ ಸುತ್ತಿ ಅದರ ಮೇಲೆ ಬಾಸಿಂಗ ಕಟ್ಟುತ್ತಾರೆ. ಬೇರೆ ಜಾತಿಯ ವರರು ಕಟ್ಟಿಕೊಳ್ಳುವಂತಹ ಬೆಂಡಿನ ಬಾಸಿಂಗವನ್ನೇ ಇವರೂ ಮದುಮಗನಿಗೆ ಕಟ್ಟುತ್ತಾರೆ. ವರನು ಬಿಳಿ ಬನಿಯನ್ ಹಾಕಿಕೊಂಡು ಕುತ್ತಿಗೆಯ ತುಂಬ ಮದುವೆಗೆಂತಲೇ ಬೇನೆಯುವರಿಂದ ಎರುವಲು ಪಡೆದ ಅಥವಾ ಅನು

ಕೂಲವಿದ್ದರೆ ತಾನೇ ಮಾಡಿಸಿದ ಬಂಗಾರದ ಆಭರಣ ಧರಿಸಿರುತ್ತಾನೆ. ಇವರಲ್ಲಿ ವರನು ಅಂಗಿ ಹಾಕಿಕೊಳ್ಳುವ ಪದ್ಧತಿ ಇಲ್ಲ. ವರನು ಕಿವಿಯಲ್ಲಿ ದೊಡ್ಡ ಗಾಲಿವಂಟಿ ಧರಿಸಿರುತ್ತಾನೆ. ವರನ ಕೈಯಲ್ಲಿ ಎಲೆ-ಅಡಿಕೆಯ ವೀಳ್ಯದ ಪಟ್ಟಿ ಇರುತ್ತದೆ. ವರಗಾಯಿಯ ಬದಲು ಆತ ಕಾಡುಗೋಲನ್ನು ಇನ್ನೊಂದು ಕೈಯಲ್ಲಿ ಹಿಡಿಯುತ್ತಾನೆ. ಈ ಕಾಡುಗೋಲನ್ನು ಎಲ್ಲಿಯೂ ನೆಲದ ಮೇಲಿಡುವದಿಲ್ಲ. ಊಟ ಮಾಡುವಾಗಲೂ ಆತ ಅದನ್ನು ಸೊಂಟಕ್ಕೆ ಸಿಕ್ಕಿಸಿಕೊಂಡಿರುತ್ತಾನೆ.

ಮದುಮಗನು ಆಯುಧಧಾರಿಯಾಗಿ ಮದುವೆಗೆ ತೆರಳುವ ಕುರಿತು ಒಂದು ಐತಿಹ್ಯವಿದೆ. ಅದೇಂದರೆ:- ತಮ್ಮನ ಮಗಳ ಮದುವೆಗೆ ಅಣ್ಣ-ತಮ್ಮ ಇಬ್ಬರೂ ಒಬ್ಬೊಬ್ಬ ವರನನ್ನು ಪರಸ್ಪರರಿಗೆ ತಿಳಿಯದೇ ಗೊತ್ತುಪಡಿಸುತ್ತಾರೆ. ಇಬ್ಬರು "ವರರ" ದಿಬ್ಬಣಗಳೂ ಬರುತ್ತವೆ. ಅಲ್ಲಿ ಯುದ್ಧವಾಗಿ ಮದುಮಗಳ ತಂದೆ ಸಾಯುತ್ತಾನೆ. ವಧುವು ತೀರಿಹೋದ ತನ್ನ ತಂದೆಯೇ ಬಂದು ತನ್ನನ್ನು ಧಾರೆ ಎರೆದು ಕೊಡಬೇಕೆಂದು ಹಟ ಹಿಡಿದಾಗ, ಸತ್ತ ಅವಳ ತಂದೆಯ ಪ್ರೇತ ಬಂದು ವಧುವನ್ನು ಧಾರೆ ಎರೆದು ಕೊಟ್ಟು ಮರಳಿ ಸತ್ತವರ ಲೋಕಕ್ಕೇ ತೆರಳುತ್ತದೆ. ಆಗಿನಿಂದ ವರನು ದಿಬ್ಬಣದ ಸಂಗಡ ಬರುವಾಗ ಕೈಯಲ್ಲಿ ಆಯುಧ ಹಿಡಿದುಕೊಂಡೇ ಬರುವ ಸಂಪ್ರದಾಯ ಬೆಳೆದು ಬಂದಿತಂತೆ.

ಮದುವೆಯ ಹೆಣ್ಣನ್ನು ಒಪ್ಪಿ, ಒಪ್ಪಿಗೆಯ ಉಂಗುರ (Engagement Ring) ಹಾಕುವದುಂಟು. ವಧುವ ಇತರ

ಜಾತಿಯ ವಧುಗಳಂತೆ ಸೀರೆ ಉಟ್ಟು, ತಲೆಬಾಚಿಕೊಂಡು ಬಾಸಿಂಗ ಧರಿಸುತ್ತಾಳೆ. ಹೆಣ್ಣಿನ ಈ ಬಾಸಿಂಗಕ್ಕೆ 'ತೊಂಡಿಲ ಬಾಸಿಂಗ' ಎಂತ ಹೆಸರು. ಇದು ಗೊಂಡರಲ್ಲಿಯಲ್ಲದೇ ಬೇರಾರಲ್ಲೂ ಕಾಣಸಿಗುವದಿಲ್ಲ.

ದಿಬ್ಬಣದ ಸಂಗಡ ಮದುಮಗನೊಡನೆ ಕಲಶಗಿತ್ತಿಯಾಗಿ ಹೊರಟ ವರನ ಸಹೋದರಿಯು ವಧುವಿನ ಬಳಿ ಕುಳಿತು ಆಕೆಯ ತಲೆಯ ಕೂದಲನ್ನು ಬಾಚುವದು, ಹೂ ಮುಡಿಸುವದು ಇತ್ಯಾದಿ ಕೆಲಸ ಮಾಡುತ್ತಾಳೆ. ಮದುಮಗಳು 'ತೊಂಡಿಲ' ಬಾಸಿಂಗ ಧರಿಸಿ ವೀಳ್ಯದೆಲೆಯನ್ನು ಕೈಯಲ್ಲಿ ಹಿಡಿದುಕೊಂಡು ಮಂಟಪಕ್ಕೆ ಬರುತ್ತಾಳೆ. ಅಲ್ಲಿ ವರನ ಜೊತೆ ಕುಳಿತಾಗ, ಅವಳ ತಂದೆ ಹಾಲಿನಲ್ಲಿ ಮಗಳನ್ನು ಧಾರೆ ಎರೆದು ವರನಿಗೆ ತನ್ನ 'ಕನ್ಯಾದಾನ' ಮಾಡುತ್ತಾನೆ. ವಧುವು ವರನ ಎಡಕ್ಕೆ ಕುಳಿತುಕೊಳ್ಳುತ್ತಾಳೆ. ವಧು-ವರರು ಪರಸ್ಪರ ಮಾಲೆ ಹಾಕಿಕೊಳ್ಳುವ ಪದ್ಧತಿ ಇಲ್ಲ. 'ಚತ್ತಗಾರ' ನೆಂತ ಕರೆಸಿಕೊಳ್ಳುವ ಮದುಮಗನ ಭಾವ (ವಧುವಿನ ಸಹೋದರ) ವರನಿಗೆ ಕೊಡೆ ಹಿಡಿದು, ಬೀಸಣಿಗೆಯಿಂದ ಗಾಳಿ ಹಾಕುತ್ತಿರುತ್ತಾನೆ.

ಧಾರೆ ಎರೆದ ಕನ್ಯೆಯ ತಂದೆ-ತಾಯಿಗೆ ವರನು ವೀಳ್ಯದೆಲೆಯ ಇಪ್ಪತ್ತು ರೂಪಾಯಿಗಳನ್ನು ಇಟ್ಟು ಉಡುಗೊರೆ ನೀಡುತ್ತಾನೆ. ಮದುವೆ ಮುಗಿದ ಐದನೇ ದಿನ (ಈಗ ಮರುದಿನ) ವಧು-ವರರು ದೇವಸ್ಥಾನಕ್ಕೆ ಹೋಗು

ತ್ತಾರೆ. ಬಾಸಿಂಗವನ್ನು ಮದುವೆ ಮುಗಿದ ನಂತರ ಹೆಣ್ಣಿನ ಅಪ್ಪನ ಮನೆಯ ಕೋಳುಗಂಬಕ್ಕೆ ಕಟ್ಟುತ್ತಾರೆ. ಈ ಸಮಾರಂಭದಲ್ಲಿ ಮುತ್ತೈದೆಯರಿಗೆ ಯಾವ ಕೆಲಸ ಕಾರ್ಯ ಗಳೂ ಇಲ್ಲ.

ಮೊದಮೊದಲು ಎಂಟು ದಿನಗಳ ಮದುವೆಯುತ್ತಂತೆ. ಈಗ ಅದು ಒಂದೆರಡು ದಿನಗಳಲ್ಲಿಯೇ ಮುಗಿಯುತ್ತದೆ. ಮದುವೆಯಾದ ಮರುದಿನ ವರನು ವಧುವನ್ನು ತನ್ನ ಮನೆಗೆ ನಡೆಸಿಕೊಂಡೇ ಕರೆದೊಯ್ಯುತ್ತಾನೆ. ಮನೆ ವಿಪರೀತ ದೂರವಿದ್ದರೆ ಮಾತ್ರ ಬಸ್ ಪ್ರಯಾಣ.

ಸಾಮಾನ್ಯವಾಗಿ ಮದುವೆಯ ಕಾರ್ಯಕ್ರಮಗಳು ಹಾಡುಗಳಿಂದಲೇ ಕೂಡಿರುತ್ತವೆಯಾದರೂ, ಹಾಡು ಹೇಳದೇ ಲಗ್ನ ಪೂರೈಸಿದ್ದೂ ಉಂಟೆಂದು ತಿಳಿದುಬಂದಿದೆ. ವರದಕ್ಷಿಣೆ ಪದ್ಧತಿ ಗೊಂಡರಲ್ಲೂ ಇದೆ. ಆದರೆ ಅದು ಬರೇ ನಾಲ್ಕು ವರಹ (ಅಂದರೆ ಈಗಿನ ಹದಿನಾರು ರೂ.) ಮಾತ್ರ. ಬಹಿಷ್ಠೆಯಾದ ಗೊಂಡ ಸ್ತ್ರೀಯರು ಮೂರನೇ ದಿನವೇ ಸ್ನಾನಮಾಡಿ, ಮನೆಯ ಒಳಗೆ ಪ್ರವೇಶಿಸುತ್ತಾರೆ. ೧೨–೧೪ ವರ್ಷದ ಹೆಣ್ಣು ಮಕ್ಕಳಿಗೆ ಮದುವೆಯಾಗುವಾಗ ಸಾಮಾನ್ಯ ವಾಗಿ ಅಂತಹವರು ಬಹಿಷ್ಠೆಯಾಗಿರುವದಿಲ್ಲ. ಹೀಗಾಗಿ ತನ್ನ ಹೆಂಡತಿ ಬಹಿಷ್ಠೆಯಾಗುವವರೆಗೆ (ಗೊಂಡರು ಇದಕ್ಕೆ ಹೆಣ್ಣಾಗುವದು, ಮೈನೆರೆಯುವದು ಇತ್ಯಾದಿ ಶಬ್ದಗಳಿಂದ ಕರೆಯುತ್ತಾರೆ) ಗಂಡ ಹೆಂಡತಿಯ ಹತ್ತಿರ ಮಾತಾಡುವ ದಿಲ್ಲ. ಹೆಂಡತಿಯೂ ಗಂಡನ ಬಳಿ ಮಾತಾಡಬಾರದೆಂಬ

ಸಂಪ್ರದಾಯವಿದೆ. ಅವಶ್ಯವಾಗಿ ಮಾತಾಡಬೇಕಾದರೆ ಮೂರನೇ ವ್ಯಕ್ತಿಯ ಸಹಕಾರ ಪಡೆಯುತ್ತಾರೆ. ಇದು ಗೊಂಡರಲ್ಲಿ ಮಾತ್ರ ಕಾಣಸಿಗುವ ವೈಶಿಷ್ಟ್ಯ.

'ಶೋಭನ' ಮಾಡುವಾಗ ಹೆಣ್ಣಿಗೆ ಸಿಂಗಾರದ ಹೂ ಮುಡಿಸಿ, ಹಾಡು ಹಾಡುತ್ತಾರೆ. ಚೊಚ್ಚಲ ಬಸಿರಾದರೆ ಏಳನೆಯ ತಿಂಗಳಿಗೇ ಸೀರೆ ಉಡಿಸಿ ತವರಿನವರೂ, ನೆಂಟರಿಷ್ಟರೂ ಊಟಮಾಡಿ ತವರಿಗೆ ಕರೆದೊಯ್ಯುತ್ತಾರೆ.

ಹಾಲಕ್ಕಿ ಗೌಡರಲ್ಲಿರುವ ಅಣ್ಣನ ಹೆಂಡತಿಯನ್ನು ತಮ್ಮಂದಿರು ಭೋಗಿಸುವ ಪದ್ಧತಿ ಇವರಿಗೆ ವಿಚಿತ್ರವೂ, ಹೊಲಸೂ ಆಗಿ ಕಾಣಿಸುತ್ತದೆಯಂತೆ. ಆದ್ದರಿಂದ ಆ ಪದ್ಧತಿ ಗೊಂಡರಲ್ಲಿ ಇಲ್ಲ.

ಗಂಡನು ಸತ್ತರೆ ಆತನ ಹೆಂಡತಿ (ವಿಧವೆ) ದೇವಸ್ಥಾನಕ್ಕೆ ಹೋಗಿ ಬರಬೇಕು. ಸಣ್ಣ ಮಂಗಳಸೂತ್ರವನ್ನು ಇಟ್ಟುಕೊಳ್ಳಬಹುದು. ಸೂತಕದಲ್ಲಿ ಶ್ವೇತವಸ್ತ್ರ ಧರಿಸಬೇಕು. ಗಂಡನು ಕೊಟ್ಟ ಮೂಗುತಿಯನ್ನು ಮೂರು ದಿನ ಬಾಳೇ ಗಿಡಕ್ಕೆ ಹಾಕಿ ಮತ್ತೆ ದೇವಸ್ಥಾನಕ್ಕೆ ಹೋಗಿ ಬಂದು ಸೂತಕ ಮುಗಿದ ಮೇಲೆ ಧರಿಸಬಹುದು. ವಿಧವೆ ಪುನರ್ವಿವಾಹ ("ಉಡಿಕೆ") ಮಾಡಿಕೊಳ್ಳಬಹುದು. ಒಬ್ಬರಾದ ಮೇಲೆ ಒಬ್ಬರಂತೆ ಎಷ್ಟು ಜನರ ಸಂಗಡವೂ ಸಂಸಾರ ಸಾಗಿಸಬಹುದು. ಗಂಡನನ್ನು ಬಿಟ್ಟವಳು ಅಥವಾ ಗಂಡ

ಹೆಂಡತಿಯನ್ನು ಬಿಟ್ಟಾಗ ಅಂತವಳು 'ಬಿಡದಾರಿ' ಹೆಂಗಸು ಎನಿಸಿಕೊಳ್ಳುತ್ತಾಳೆ. ಇಂತಹ 'ಬಿಡದಾರಿ' ಸ್ತ್ರೀಯರು ಹೆಂಡತಿಯನ್ನು ಬಿಟ್ಟವನನ್ನೇ ಹುಡುಕಿ ಮದುವೆಯಾಗ ಬೇಕು. ವಿಧವೆಯರಿಗೆ ಇದು ಅನ್ವಯಿಸುವದಿಲ್ಲ.

ಮರಣ : ಗೊಂಡರಲ್ಲಿ ಸತ್ತವರ ದೇಹವನ್ನು ಸುಡುವ ಸಂಪ್ರದಾಯವಿದೆ. ಆದರೆ ಬಾಲಕರು, ಗರ್ಭಿಣಿ ಸ್ತ್ರೀಯರು, ಬಾಣಂತಿಯರು ಸತ್ತಾಗ ಮಾತ್ರ ಶವಗಳನ್ನು ಹುಗಿಯುತ್ತಾರೆ. ತಿರುಪತಿ 'ಯಾತ್ರೆ' ಮಾಡಿದವರ ಶವವನ್ನು 'ಗರ್ನಾಲು' ಹೊಡೆದು ಸುಡುತ್ತಾರೆ. ಸತ್ತವರ ಸೂತಕವನ್ನು ಕಡ್ಡಾಯವಾಗಿ ಹನ್ನೊಂದು ದಿವಸ ಆಚರಿಸುತ್ತಾರೆ. ಮಧ್ಯ ಹಬ್ಬ ಹರಿದಿನ ಬಂದರೆ ಹಬ್ಬಗಳನ್ನು ಮುಂದಕ್ಕೆ ಹಾಕುತ್ತಾರೆ. ಸೂತಕದಿಂದ ಶುದ್ಧರಾಗಲು ಇವರು 'ಪಂಚಗವ್ಯ' ಸೇವಿಸಿ, ತಲೆ-ಮೈ ಸ್ನಾನ ಮಾಡುತ್ತಾರೆ. ಸೂತಕ ಕಳೆಯುವ ದಿನ 'ಕಾಗೆಗೆ ಅನ್ನ' ಹಾಕುತ್ತಾರೆ. ಗತಿಸಿದವರು ಕಾಗೆಯ ರೂಪದಲ್ಲಿ ಬರುತ್ತಾರೆಂಬ ನಂಬಿಕೆ ಇದೆ.

೭. ಭೂತ-ಪ್ರೇತಗಳಲ್ಲಿ ನಂಬಿಕೆ

ಭೂತ-ಪ್ರೇತಗಳಲ್ಲಿ, ದೆವ್ವ-ಪಿಶಾಚಿಗಳಲ್ಲಿ ಇವರಿಗೆ ಅತಿಯಾದ ನಂಬಿಕೆ. ಭೂತ ಪ್ರೇತಗಳೇ ಇವರ ನಿತ್ಯ ಜೀವನವನ್ನು ನಿಯಂತ್ರಿಸುತ್ತಿವೆ. ಭೂತಗಳನ್ನು ಪತ್ತೆ ಮಾಡಲು

ಗೊಂಡರ ಜಾತಿಯವರೇ ಇದ್ದಾರೆ. ಅವರಿಗೆ "ನಿಮಿತ್ಯ ಕಾಣುವವರು" ಅನ್ನುತ್ತಾರೆ. ಇನ್ನು ಮಣೆಯ ಮೇಲೆ ಅಕ್ಕಿ ಹಾಕಿಕೊಂಡು, ಆ ಅಕ್ಕಿಯನ್ನೆಲ್ಲ ಕೈಯಿಂದ ತಿರುಗಿಸಿ, ಸ್ವಲ್ಪ ಅಕ್ಕಿಯನ್ನು ಕೈಯಲ್ಲಿ ತಕ್ಕೊಂಡು, ಆ ಅಕ್ಕಿಯನ್ನು ಲೆಕ್ಕಮಾಡಿ, ಆ ಅಕ್ಕಿಯ ಸಂಖ್ಯೆಯ ಮೇಲಿಂದ ಪೀಡಿಸುತ್ತಿರುವ ದೆವ್ವವು ಹಾಯ್ಗುಳಿಯೋ, ಮಾಸ್ತಿಯೊ, ಜಟ್ಗನೋ, ರಣಗೋಲೆಯೊ ಏನೆಂಬುದನ್ನು ಕಂಡು ಹಿಡಿಯುತ್ತಾರೆ. ಹೀಗೆ ಅಕ್ಕಿಗಳ ಸಂಖ್ಯೆಯ ಮೇಲಿಂದ ದೆವ್ವಗಳನ್ನು ಪತ್ತೆ ಹಚ್ಚುವದಕ್ಕೆ ಗೊಂಡರು 'ಅಕ್ಕಿ ಕಾಂಬುದು' ಎನ್ನುತ್ತಾರೆ.

ದೆವ್ವ–ಭೂತಗಳಿಗೆ ಕೋಳಿಯನ್ನು ಬಲಿಕೊಡುತ್ತಾರೆ. 'ಪಿಂಡ' ಎಂಬ ದೊಡ್ಡ ಬಲಿಯನ್ನು ಮಾಡಿ ದೆವ್ವಗಳನ್ನು ಸಂಪ್ರೀತಗೊಳಿಸುತ್ತಾರೆ. ಇದಕ್ಕೆ 'ಭೂತದ ಭೋಗ' ಎಂದು ಹೆಸರು. ಬಲಿಯನ್ನು ಕೊಟ್ಟ ನಂತರ ಕುಚ್ಚಿಗೆ ಅಕ್ಕಿ ಅನ್ನವನ್ನು ಗೆರಸಿಯಲ್ಲಿಟ್ಟು ದೆವ್ವ ತಿರುಗಾಡುವ ಮೂರು ದಾರಿ ಕೂಡುವಲ್ಲಿ ಮೂಡಣಕ್ಕೋ, ತೆಂಕಲಕ್ಕೋ, ಅಥವಾ ಇನ್ನೊಂದು ದಿಕ್ಕಿಗೋ ಇಡುತ್ತಾರೆ. ಇದೂ ಅಲ್ಲದೇ ಉದ್ದ ಕೋಲಿಗೆ ಬಟ್ಟೆ ಸುತ್ತಿ, ಅದಕ್ಕೆ ಎಣ್ಣೆ ಹೊಯ್ದು "ದೊಂದಿ" ಮಾಡಿ, ಅದನ್ನು ಚೌಕಾಕಾರದಲ್ಲಿ ಕೂಡಿಸಿಟ್ಟ ಬಾಳೆಯ ದಿಂಡಿಗೆ ಸಿಕ್ಕಿಸಿ ಇಡುತ್ತಾರೆ. ಇದಕ್ಕೆ ಭೂತ–ಪ್ರೇತಗಳಿಗೆ ಸಲ್ಲಿಸುವ 'ದೀಪ ಸೇವೆ' ಎನ್ನಬಹುದು.

ತಮ್ಮ ಮನೆಯಲ್ಲಿ ಯಾರಿಗಾದರೂ ಸೌಖ್ಯವಿಲ್ಲದಿರುವಾಗ ದೇವರ ಮೊರೆ ಹೋಗುವದೇ ಇವರ ಪ್ರಪ್ರಥಮ

ಕೆಲಸ. ಆ ದೇವರು ಗೊಂಡರ ಮನೆಯಲ್ಲಿರುವ ರೋಗಿಗೆ ಡಾಕ್ಟರರ ಔಷಧಿ ಒಳ್ಳೆಯದೋ ಯಾ ದೆವ್ವ-ಭೂತಗಳ ಕಾಟ ದಿಂದಾಗಿದ್ದರೆ ದೆವ್ವ-ಭೂತಗಳಿಗೆ ಬಲಿನೀಡುವದು ಒಳ್ಳೆ ಯದೋ ಎಂದು ನಿರ್ಧರಿಸಿ ಪ್ರಸಾದ ನೀಡಬೇಕು. ದೇವರು ಪ್ರಸಾದ ನೀಡಿದಂತೆ ಅಂತಿಮ ಘಟ್ಟದವರೆಗೂ ನಡೆದುಕೊಳ್ಳು ವವರು ಶಿರಾಲಿಯ ಗೊಂಡರು. ಇತ್ತೀಚೆಗೆ ನವಮಾಸ ತುಂಬಿದ ಒಬ್ಬಳು ಗರ್ಭಿಣಿ ಹೆಂಗಸಿಗೆ ಹೊಟ್ಟೆನೋವು ಸುರು ವಾಯಿತು. ಮಗು ಹೊಟ್ಟೆಯಲ್ಲಿ ಅಡ್ಡ ಸಿಕ್ಕಿಕೊಂಡು ಬಿಟ್ಟಿದೆ ಎಂಬುದು ಊರ ಬಿಜಂತ್ರಿ (ಗ್ರಾಮೀಣ ಸೂಲಗಿತ್ತಿ)ಗೆ ತಿಳಿದು ಆಕೆ 'ತಾನೇನೂ ಮಾಡಲಾರೆ, ವೈದ್ಯರನ್ನು ಕೂಡಲೇ ಕರೆಸಿ' ಎಂದಳು. ತಕ್ಷಣ ವೈದ್ಯರನ್ನು ಕರೆಸಲು ಸಿದ್ಧನಿಲ್ಲದ ಗೊಂಡ ಇದು "ದೆವ್ವದ ಕಾಟವೇ ಸೈ" ಎಂದು ತೀರ್ಮಾನಿಸಿ, ತನ್ನ ನಂಬಿಕೆಯನ್ನು ದೃಢಪಡಿಸಿಕೊಳ್ಳಲು ಮೂರು ಮೈಲು ದೂರದ ಆಳವೇ ಕೋಡಿಯ ದೇವಸ್ಥಾನಕ್ಕೆ ನಡೆದುಕೊಂಡೇ ಹೋಗಿ, 'ಈಗ ದೆವ್ವಗಳಿಗೆ ಬಲಿ ಕೊಟ್ಟರೆ ಹೆರಿಗೆ ಸುಲಭ ವಾಗುತ್ತದೋ, ಯಾ ಡಾಕ್ಟರ್‌ರನ್ನು ಕರೆಸಬೇಕೋ' ಎಂದು ದೇವರ ಬಳಿ ಪ್ರಸಾದ ಕೇಳಿದ. ಅಲ್ಲಿ 'ಇದು ದೆವ್ವದ ಕಾಟ, ಡಾಕ್ಟರ್‌ರನ್ನು ಕರೆಸುವದು ಬೇಡಾ' ಎಂದಾಯಿ ತಂತೆ. 'ನಂಗೆ ಮೊದಲು ಇದು ದೆವ್ವದ ಕಾಟ ಅಂಬುದು ಗೊತ್ತಿತ್ತು' ಎಂದ ತನ್ನ ಸಂದೇಹಕ್ಕೆ ಸಂತೋಷಪಟ್ಟು, ದೆವ್ವಕ್ಕೆ ಬಲಿ ನೀಡಲು ಬೇಕಾಗುವ ಸಾಮಾನುಗಳನ್ನೆಲ್ಲ ಅಂಗಡಿಗಳಲ್ಲಿ, ಬೇರೆಯವರ ಮನೆಗಳಲ್ಲಿ ಸಂಗ್ರಹಿಸಿಕೊಂಡು

ಮನೆಗೆ ಮರಳಿದಾಗ ಕಂಡಿದ್ದು ಆ ಗರ್ಭಿಣಿ ಹೆಂಗಸಿನ ಶವವನ್ನು! ಪಾಪ!! ಸಮಯಕ್ಕೆ ಸರಿಯಾಗಿ ವೈದ್ಯರನ್ನು ಕರೆಸಿ ಸೂಕ್ತ ಚಿಕಿತ್ಸೆ ಮಾಡಿಸಿದ್ದರೆ ಆ ಸ್ತ್ರೀ ಖಂಡಿತಾ ಉಳಿಯುತ್ತಿದ್ದಳು. ಇಲ್ಲಿ ಇನ್ನೂ ವೈಶಿಷ್ಟ್ಯವಿರುವ ಅಂಶವೆಂದರೆ, ಹೀಗೆ ಒಮ್ಮೆ ಕಹಿ ಅನುಭವ ಪಡೆದವರೂ ಸಹ ತುರ್ತು ಪರಿಸ್ಥಿತಿಗಳಲ್ಲಿ ಮುಂದಿನ ಸಾರೆ ಪುನಃ ದೆವ್ವ-ಭೂತಗಳ ಮೊರೆ ಹೋಗುತ್ತಾರೆ. 'ಔಷಧ ಕೊಡಿಸಿದರೆ ಪ್ರಯೋಜನವೇ ಇಲ್ಲ' ಎಂಬುದು ಅವರ ಖಚಿತವಾದ ನಂಬಿಕೆ. ಎಷ್ಟು ತಿಳಿಸಿ ಹೇಳಿದರೂ ಇವರು ತಮ್ಮ ಹಾದಿ ಬಿಡರು. ಇದಕ್ಕೆ ಕಾರಣ ಅವರು ತಳೆದ ಧಾರ್ಮಿಕ ನಂಬುಗೆಗಳು. ಅವು ಗೊಂಡ ಜನಾಂಗದ ಜನರಲ್ಲಿ ವೈಜ್ಞಾನಿಕ ವಿಚಾರಗಳಿಗಿಂತ ಹೆಚ್ಚು ಪ್ರಬಲವಾಗಿವೆ.

೮. ಗೊಂಡರಿಗೆ ಸರಕಾರ ನೀಡಿರುವ ಸವಲತ್ತುಗಳು

ಕೇಂದ್ರ ಸರಕಾರವು ಗೊಂಡರನ್ನು ಪರಿಶಿಷ್ಟ ಜನಾಂಗಕ್ಕೆ ಸೇರಿಸಿದ್ದರಿಂದ ಭಾರತೀಯ ಸಂವಿಧಾನದ ೩೧೪ ಮತ್ತು ೩೪೨ ನೇ ಪರಿಚ್ಛೇದ (Article) ಗಳ ಪ್ರಕಾರ ಗೊಂಡರಿಗೆ ಹಲವಾರು ಸೌಕರ್ಯಗಳು ಲಭ್ಯ. (ಆದರೆ, ಕರ್ನಾಟಕ ಸರಕಾರದ ಹಾವನೂರು ಆಯೋಗ ಮಾತ್ರ ಗೊಂಡರನ್ನು ಹಿಂದುಳಿದ ಜನಾಂಗಕ್ಕೆ ಸೇರಿಸಿಲ್ಲ).

ಕೃಷಿಗೆ ಬಳಸಲು ಗೊಂಡರಿಗೆ ಸಾಲ ನೀಡುವಾಗ ಭೂ ಅಭಿವೃದ್ಧಿ ಬ್ಯಾಂಕು ಬೇರೆಯವರಿಗೆ ೨೫% ಸಹಾಯಧನ (ಸಬ್ಸಿಡಿ) ನೀಡಿದರೆ, ಗೊಂಡರಿಗೆ (ಮತ್ತು ಇನ್ನಿತರ ಪರಿಶಿಷ್ಟ ಜನಾಂಗಗಳವರಿಗೆ) ೩೩% ಸಬ್ಸಿಡಿ ನೀಡುತ್ತಿದೆ. ಅಂತೆಯೇ, ಭೂನ್ಯಾಯ ಮಂಡಳಿ ತೀರ್ಮಾನಿಸಿದ ಭೂ ವ್ಯಾಜ್ಯ ಪ್ರಕರಣಗಳನ್ನು ಹುಡುಕಿ, ಗೊಂಡರು ಸರಕಾರಕ್ಕೆ ಹಣ ಕಟ್ಟಲು ಅಸಾಧ್ಯವಾದುದನ್ನು ಬ್ಯಾಂಕು ತಾನೇ ಕಟ್ಟಿ ಆಮೇಲೆ ಸರಕಾರದಿಂದ ಪಡೆಯಬೇಕೆಂದಿದೆ. ಗೊಂಡರ ಮನೆ ಮನೆಗೆ ಹೋಗಿ ಕೃಷಿ, ನೀರಾವರಿ ಇತ್ಯಾದಿ ಕಾರ್ಯಗಳಿಗೆ ಹಣದ ಸಹಾಯ ಮಾಡುವಂತೆ ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕುಗಳ ನೌಕರರಿಗೆ ಸರಕಾರ ಆದೇಶ ನೀಡಿದೆ.

ಕುಂಟವಾಣಿಯ ಸೋಮಯ್ಯ ಗೊಂಡ ಎಂಬವರಿಗೆ ಭಟಕಳ ಭೂ ನ್ಯಾಯ ಮಂಡಳಿಯಲ್ಲಿ ಸದಸ್ಯತ್ವ ನೀಡಿ, ಗೊಂಡ ಜನಾಂಗಕ್ಕೆ ಪ್ರಾತಿನಿಧ್ಯ ನೀಡಲಾಗಿದೆ. ಶಾಲೆಗೆ ತೆರಳಿ ಶಿಕ್ಷಣ ಕಲಿಯುವ ಎಲ್ಲ ಗೊಂಡ ಮಕ್ಕಳಿಗೂ ಸರಕಾರ ವಿದ್ಯಾರ್ಥಿ ವೇತನ (Scholarship) ನೀಡುತ್ತಿದೆ. ಇದರಂತೆ ಒಂದರಿಂದ ನಾಲ್ಕನೇ ವರ್ಗದ ವರೆಗಿನ ಗೊಂಡ ಬಾಲಕರಿಗೆ ತಾಲೂಕಾ ಅಭಿವೃದ್ಧಿ ಮಂಡಳಿಯು ವಾರ್ಷಿಕ ತಲಾ ರೂ. ೨೦/- ನೀಡುತ್ತಿದೆ. ಐದರಿಂದ ಏಳನೇ ವರ್ಗ ಕಲಿಯು ತ್ತಿರುವ ವಿದ್ಯಾರ್ಥಿಗಳಿಗೆ ಸಮಾಜ ಕಲ್ಯಾಣ ಇಲಾಖೆಯು ತಲಾ ವಾರ್ಷಿಕ ರೂ. ೫೦/- ನ್ನು ನೀಡುತ್ತಿದೆ. ಎಂಟರಿಂದ ಎಸ್. ಎಸ್. ಎಲ್. ಸಿ. ಕಲಿಯುತ್ತಿರುವ ಮಕ್ಕಳಿಗೆ ತಲಾ

ವಾರ್ಷಿಕ ರೂ. ೭೫/- ನ್ನು ಸಮಾಜ ಕಲ್ಯಾಣ ಇಲಾಖೆ ನೀಡುತ್ತಿದೆ. ಪಂಚಾಯತ ಕಛೇರಿಗಳಿಂದ ಗೊಂಡ ವಿದ್ಯಾರ್ಥಿಗಳಿಗೆ ಉಚಿತ ಸಮವಸ್ತ್ರ ನೀಡಲಾಗುತ್ತಿದೆ. ಈ ವರ್ಷ ಪಿ. ಯು. ಸಿ. ಯಲ್ಲಿ ಮೂವರು ಗೊಂಡ ವಿದ್ಯಾರ್ಥಿಗಳು ವ್ಯಾಸಂಗ ನಡೆಸುತ್ತಿದ್ದು, ಅವರಿಗೆ ಪ್ರತಿ ತಿಂಗಳು ರೂ. ೪೦ ರಿಂದ ೬೦ ರ ವರೆಗೆ ನೀಡಲಾಗುತ್ತಿದೆ.

ಕರ್ನಾಟಕ ಸರಕಾರದ ಸಮಾಜಕಲ್ಯಾಣ ಇಲಾಖೆ ನಡೆಸುತ್ತಿರುವ ಭಟಕಳದ ಬಿ. ಡಿ. ಓ. ರವರ ನಿಯಂತ್ರಣದಲ್ಲಿರುವ ಜನರಲ್ ಹಾಸ್ಟೆಲ್ಲಿನಲ್ಲಿ ಐದನೇ ಇಯತ್ತೆಯಿಂದ ಎಸ್. ಎಸ್. ಎಲ್. ಸಿ. ವರೆಗೆ ಕಲಿಯುತ್ತಿರುವ ಐದು ಗೊಂಡ ವಿದ್ಯಾರ್ಥಿಗಳಿದ್ದು ಅವರಿಗೆ ಉಚಿತ ಊಟ, ವಸತಿ ಅಲ್ಲದೇ ಹಾಸಿಗೆ, ಟ್ರಂಕುಗಳನ್ನೂ ಉಚಿತವಾಗಿ ನೀಡಲಾಗುತ್ತಿದೆ.

ಭಟಕಳ ತಾಲೂಕಾ ಭೂ ನ್ಯಾಯ ಮಂಡಳಿಯ ಸದಸ್ಯರಾಗಿರುವ ಶ್ರೀ ಎಸ್. ಎಸ್. ಗೊಂಡರು ವಯಸ್ಕ ಶಿಕ್ಷಣ ಯೋಜನೆಯಂತೆ ಮುವತ್ತು ಜನ ಗೊಂಡರಿಗೆ ಕುಂಟವಾಣಿಯಲ್ಲಿ ಓದು ಬರಹ ಕಲಿಸಿದ್ದು, ಆ ವಯಸ್ಕರಿಗೆ ಸಹಿ ಹಾಕಲಿಕ್ಕೆ, ಪತ್ರ ಓದಲಿಕ್ಕೆ-ಬರೆಯಲಿಕ್ಕೆ ಈಗ ಸಾಧ್ಯ.

ಆದರೆ, ಹರಿಜನರಿಗೆ ಕಟ್ಟಿಸಿಕೊಡುತ್ತಿರುವಂತಹ ಮನೆಗಳನ್ನು ಸರಕಾರ ಗೊಂಡರಿಗೆ ಕಟ್ಟಿಸಿ ಕೊಟ್ಟಿಲ್ಲ.

ಕುಡಿಯುವ ನೀರಿನ ಬಾವಿಯನ್ನು ತೋಡಿಸಿಕೊಟ್ಟಿಲ್ಲ. ಕೃಷಿ ಮಾಡಲು ಬಡ ಗೊಂಡರಿಗೆ ಸ್ವಲ್ಪವೂ ಜಮೀನನ್ನು ನೀಡಿಲ್ಲ. ಇವೆಲ್ಲವೂ ಸರ್ಕಾರದಿಂದ ಇನ್ನೂ ಆಗಬೇಕಾದ ಕೆಲಸಗಳು.

೯. ಗೊಂಡರ ಪದಗಳು

ಗೊಂಡರ ಪದಗಳು ಅವರ ಸಾಮಾಜಿಕ-ಧಾರ್ಮಿಕ ಆಚರಣೆಗಳ ಹಿನ್ನೆಲೆಯಲ್ಲಿ ಮೂಡಿಬಂದ ವಿಶಿಷ್ಟ ತರಹದ ಪದಗಳಾಗಿವೆ. ಈ ಪದಗಳ ಅಭ್ಯಾಸದಿಂದ ಗೊಂಡರ ಜೀವನಕ್ರಮ, ನಂಬಿಕೆಗಳು, ಪೂಜಾವಿಧಾನ ಮುಂತಾದವುಗಳನ್ನು ಅರಿಯಬಹುದು. 'ಶಿವಭಕ್ತ ಮಹಾರಾಜ' ಮತ್ತು 'ಸೋಮ ಚಕ್ರವರ್ತಿ' ಯಂತಹ ಕಥೆಗಳನ್ನು ಪದಗಳಲ್ಲಿ ಹೇಳುವದಲ್ಲದೇ, ಬೇರೆ ಬೇರೆ ದೇವತೆಗಳ 'ಮಂಡಲ' ಬರೆದು ಅವಕ್ಕೆ ಪೂಜೆ ಸಲ್ಲಿಸಿದ ನಂತರ ಹೇಳುವ ಮಂಡಲದ ಪದಗಳೂ ಇವೆ. ಈ ಗೀತೆಯನ್ನು ಹೇಳುವಾಗ ವಾದನಗಳನ್ನು ಬಳಸುವದಿಲ್ಲ. ಬದಲಿಗೆ ಕಥೆಗಳನ್ನು ಹಾಡಿ ಹೇಳುವಾಗ ಪಲ್ಲವಿಯನ್ನು 'ತಂದಾನೋ ತಾನಾss……' ಎಂದು ಹೇಳುವ ಇನ್ನೊಂದು ಕಂಠ ಜೊತೆಗಿರುತ್ತದೆ. ಹೀಗೆ ಇಂತಹ ದೊಡ್ಡ ಕಥನ ಗೀತವನ್ನು ಹೇಳುವ ಮತ್ತು ಅದನ್ನು ಕೇಳುವ ಜನರ ತಾಳ್ಮೆ ಮೆಚ್ಚುವಂತಹದು. ಒಂದೊಂದು ಕಥೆಯೂ ಸುಮಾರು ೧೫೦೦ ಸಾಲುಗಳ ವರೆಗೆ ಇದ್ದು, ಅವಕ್ಕೆ ಪ್ರತಿ ಸಾಲಿಗೂ ಪಲ್ಲವಿ ಸೇರಿ ಕಥೆ ಹೇಳ

ಮುಗಿಸುವ ಕಾಲದ ಅವಧಿಯನ್ನು ಊಹಿಸಬಹುದಾಗಿದೆ. ಕಥೆಯನ್ನು ಹೇಳುವ ಧಾಟಿಯಲ್ಲಿ ಸ್ವಾರಸ್ಯವಿರುವಂತೆ ಕಥೆಯ ವಸ್ತುವಿನಲ್ಲೂ ಸ್ವಾರಸ್ಯವಿದೆ. ಮತ್ತು ಕಥೆಗಳು ಹಿಂದಿನ ನಮ್ಮ ಹಳ್ಳಿಗರ ನಂಬಿಕೆಯ ಮೇಲೆ ಬೆಳೆದಿದ್ದರೂ, ಅದರಲ್ಲಿ ಅಂದಂದಿನ ಸಾಮಾಜಿಕ ನಡವಳಿಕೆಗಳೂ ಚೆನ್ನಾಗಿಯೇ ನುಸುಳಿ ಬಂದಿವೆ. ಯುದ್ಧದಲ್ಲಿ ಬಳಸುವ ಶಸ್ತ್ರಗಳು ಕತ್ತಿ, ಗುರಾಣಿ, ಕೋವಿ ಮುಂತಾದವೇ ಆದರೂ ಆ ಯುದ್ಧಕ್ಕೆ 'ಗುಂಡಿನಾಟ' ಎಂದೇ ಹೆಸರು. ಇದರಿಂದಾಗಿ ಹಳೆಯ ಕಾಲದ ಪದದಲ್ಲಿ 'ಗುಂಡು' ಎಂಬ ಆಧುನಿಕ ಯುದ್ಧ ಶಸ್ತ್ರದ ಪದ ಕಂಡು ಬಂದರೆ ಕಥನ ಗೀತೆಯ ಬೆಳವಣಿಗೆ ಸಮಾಜದಲ್ಲಾದ ಬದಲಾವಣೆಗಳನ್ನು ಹೇಗೆ ಸೇರ್ಪಡೆ ಮಾಡಿಕೊಂಡಿದೆ ಎಂಬುದನ್ನು ಕಾಣಬಹುದು. ಎಂದರೆ ಜನಪದ ಗೀತೆಗಳು ಜನಜೀವನದಿಂದ ದೂರವಾಗಿರದೇ ಅವುಗಳನ್ನು ತನ್ನ ನಡಿಗೆಯಲ್ಲಿ ತುಂಬಿಕೊಂಡು ಮುಂದುವರಿಯುತ್ತವೆ ಎಂಬುದನ್ನು ಗುರುತಿಸಬಹುದು. ಗೊಂಡ ಜನಾಂಗದ ಈ ಕಥನ ಗೀತೆಗಳು ಜನಪದ ಸಾಹಿತ್ಯದ ಪ್ರಗತಿಪರ ದೃಷ್ಟಿಗೆ ದಾಖಲೆಯಾಗಿ ಉಳಿದಿವೆ ಎನ್ನಬಹುದು. ಈ ಗೊಂಡರ ಪದಗಳ ಸಂಗ್ರಹವಲ್ಲಿ ಖ್ಯಾತ ಜಾನಪದ ಸಂಗ್ರಾಹಕ ಡಾ. ಎಲ್. ಆರ್. ಹೆಗಡೆಯವರ ಕೃತಿ 'ಗೊಂಡರ ಪದಗಳು' ನನಗೆ ತುಂಬ ಉಪಕಾರಿಯಾಯಿತು.

ಗೊಂಡರು ಭತ್ತ ಕುಟ್ಟುವಾಗ, ಶೋಭಾನದಲ್ಲಿ ಭತ್ತದ ನಾಟಿ ಮಾಡುವಾಗ, ಮದುವೆಯಲ್ಲಿ ಧಾರೆ ಎರೆದು ಕೊಡು

ವಾಗ ಮುಂತಾದ ಸಂದರ್ಭಗಳಲ್ಲಿ ಈ ಹಾಡುಗಳನ್ನು ಹಾಡುತ್ತಾರೆ. ಅಂತಹ ಕೆಲವು ಪದಗಳನ್ನೀಗ ನೋಡುವ:

ಬೇರೆ ಬೇರೆ ದೇವತೆಗಳ ಮಂಡಲ ಬರೆದ ಮೇಲೆ ಗೊಂಡರು ಆ ಮಂಡಲವನ್ನು ಪೂಜಿಸುವ ಮೊದಲು ಒಂದಾದ ನಂತರ ಒಂದರಂತೆ ಮಂಡಲದ ದೇವತೆಗಳನ್ನು ಕರೆದು ಪೂಜೆಮಾಡುತ್ತಾರೆ. ಈ 'ದೆವ್ವ ಕರೆವ ಹಾಡ'ನ್ನು ಪಡೀಲ್‌ನ ಶ್ರೀ ನಾರಾಯಣ ಸುಕ್ರ ಗೊಂಡ ಎಂಬವರಿಂದ ಸಂಗ್ರಹಿಸಲಾಗಿದೆ. ಆ ಪದ ಹೀಗಿದೆ:

ದೆವ್ವ ಕರೆವ ಹಾಡು

ಕಂಕಣದಾ ಕಯಾಽ ಮುತಿಯುಮ್ಮಾಽನಾಽ
ಕುಂಕುಮುದೂ ಕೊರಳಽ ದೇವಿಯುಮ್ಮಾನಾಽ
ನಿನ್ನಽ ಸತ್ಯಽಕೇ ನಿನ್ನ ಕರದಾಽಡಿವೇಽ
ವಾರೊಂದಾಽಗೇ ನೀವೇ ಬಂದಾವಾಗೇಽ
ಮೇಲ್ ವರ್ಗದೋರೂ ನೀವೇ ಕರಿಬೇಕೀಗಾಽ
ಕೀಳ್ ವರ್ಗದೋರಾ ಕರಮ ಕಟುಬೇಕೀಗಾಽ
ಅಲ್ಲಿಂದಲ್ಲಿಗೂ ಪಯಣಾ ಹೋಗುದಂದೀಗೇಽ
ಸೋಡಿಗೆದ್ದೀಯೂ ಲಂಬಾ ತಳಮಽನಿಯೂಽ
ಸುತ್ತೇಳೂ ತಳಽಮಽನೀ ತಿರುಗಾಡೀದೋಽ
ನಿಮ್ಮಾಽವಾರೂ ಲೀಗೇ ಕರದಾಡೀರೋಽ

ನಮ್ಮ ಸಽತೀವೇ ಲೀಗೇ ಹೇಳುಬೇಕೀಗಾಽ
ಚಿಕುಚಽಣ್ಣರಿಗೂ ಬುದ್ಧಿ ಹೇಳುಬೇಕೀಗಾಽ

ಒಪು ತಾಗುದ್ದೂಽ ನೀವೇ ಒಪುಬೇಕೀಗಾಽ
ತಪು ತಾಗುದ್ದೂಽ ನೀವೇಽ ಒಪುಬೇಕಿಗಾಽ
ಮೇಲು ವರ್ಗದೋರಾಽ ಕರದಿ ಕಟುಬೇಕೀಗಾಽ
ಕೀಳು ವರ್ಗದೋರಾಽ ಕರದಿ ಕಟುಬೇಕೀಗಾಽ
ಕಾಽಯೊಡಽದೀ ಕಯ್ಯಾಽ ಮುಗೀತ್ತೇನಂದಾಽ
ಹೋಮುಗಲ್ಲೀ ನೇಮ ಮಾಡುತ್ತೇನಂದಾಽ
ಹೂಗೊಡುದೇ ಹೂಶೀ ಹಯ್ದುತ್ತೇನಂದಾಽ
ನಿಮುಕಾಽವೂಲೂಽಽ ನಮಗೆ ಆಗುಬೇಕೀಗಾಽ

ಅಲ್ಲಿಂದಲ್ಲೀಗೂ ಪಯಣಾಽ ಹೋಗೂದೀಗಾಽಽ
ಮುತಿಗೋಳಿಯೂ ಲಂಬಾಽ ತಳಮುನಿಯಾಽ
ಮುಳ್ಗಿ ಗೋಳೀಯೂ ಲಂಬಾ ತಳಮುನಿಯಾಽ
ಅವ್ವಲ್ಲರೂ ಈಗೇಽ ಕರದಾಡಾರೇಽ
ಮಾಽಯ್ತುಮ್ಮನ ದಽಯಾಽ ದರ್ಪುದಿಂದೇಽ
ಕಡ್ನಽಕಟ್ಟೂ ವೋಲಂಬಾಽ ತಳಮುಽನೀವೇಽ
ಶುತ್ರೀಳೂ ತಳಮುನೀಽ ಕರದಾಡೀದೋಽ
ಕರದಾಡೀದೋ ನಿಮ್ಮ ಮೆರದಾಽಡೀದೋಽ
ನಿಮುಕಾಽವುಲೂಽಽ ನಮುಗೇ ಲಾಗುಬೇಕಿಗಾಽ
ಜಿಕುಚ್ಚಽಣ್ಣರುಗೇ ಬುದ್ದೀ ಹೇಳುಬೇಕೀಗಾಽ

ತಪುತಾಽಗದ್ದೂ ನೀವೇ ಒಪುಬೇಕೀಗಾಽ
ಅಂತ್ಹೀಳೂ ತಾಪಾಽರೂ ಹೇಳುತಾಽರೀಗಾಽ
ಕಂಕಽಣದಾ ಕಯ್ಯಾಽ ಮುತಿಯಮ್ಮನಾಽ

ಕುಂಕುಮಾಡೂs ಕೊರಳು ದೇವಿಯುಮ್ಮನಾ
ಅಂತಾದಾs ಮರನಾ ಮೋನೇ ಜಂತ್ರಾsದಾ ಹುಯ್ಯಾಲ
ಸಂತೋಸ್ಲೀ ಬಂದೀಲಾಡೋ ಜಟ್ಟರಾಯುsನೇ
ನಿನ್ನ ಸತ್ಯsಕೇss ನಿನ್ನss ಕರದಾsಡೀದೋ
ವಾರಂತಾsಗೇs ನೀವೇ ಬಂದಾs ಮೇಲೇ
ಚಿಕುಚಣ್ಣರುಗೇ ಬುsದ್ದೀ ವರಿಬೇಕೀಗಾ
ತಪುತ್ತಾsಗದ್ದು ನೀವೆ ವಪುಬೇಕೀಗಾ
ಸುತ್ತೇಳೂs ತಳ ವಾಸ್ತೇ ಕರದಾಡಿದೇ ೪೦

ಹಡೀಲಿನ ನಾರಾಯಣ ಸುಕ್ರ ಗೊಂಡರು ಹೇಳಿದ 'ಕಲಿಕಾಲ' ಎಂಬ ಇನ್ನೊಂದು ಮಂಡಲ ಪದ್ಯದಲ್ಲಿ ಕಲಿಕಾಲಕ್ಕೂ ಹಳೆಯ ಸತ್ಯಯುಗಕ್ಕೂ ಇರುವ ವ್ಯತ್ಯಾಸವನ್ನು ಹೇಳಲಾಗಿದೆ.

ಸತ್ಯಯುಗದಲ್ಲಿ ಜನರು ಸತ್ಯವಂತರು; ಒಬ್ಬನ ಹಾದಿಯಲ್ಲಿ ಇನ್ನೊಬ್ಬರು ಹೋಗುತ್ತಿರಲಿಲ್ಲ. ಒಬ್ಬರ ಸ್ವಾರ್ಥಕ್ಕೆ ಇನ್ನೊಬ್ಬ ಅಡ್ಡಿಯಾಗುತ್ತಿರಲಿಲ್ಲ. ಅವನ ಸ್ವಾತಂತ್ರ್ಯಕ್ಕೆ ಇನ್ನೊಬ್ಬ ಕಂಟಕವಾಗುತ್ತಿರಲಿಲ್ಲ. ಒಬ್ಬನು ಇನ್ನೊಬ್ಬನ ಹೆಂಡತಿಯನ್ನು ಬಯಸುತ್ತಿರಲಿಲ್ಲ. ಬಿಡದಾರಿ ಅಂದರೆ ಗಂಡ ಬಿಟ್ಟವಳಿಗೆ ಸಾಲಿ (ಅಂದರೆ ಸೀರೆ) ಕೊಡುತ್ತಿರಲಿಲ್ಲ. ಅವಳನ್ನೂ ಮಡದಿಯಾಗಿ ಮಾಡಿಕೊಳ್ಳುತ್ತಿರಲಿಲ್ಲ. ಇತರರು ಮಾಡಿದ ಪುಣ್ಯ ಕೆಲಸಗಳನ್ನು ಹಾಳು ಮಾಡುತ್ತಿರಲಿಲ್ಲ ಎಂಬುದನ್ನು ಒಬ್ಬ ಕಟ್ಟಿದ ಕಟ್ಟೆಯನ್ನು

ಕೆಡವುತ್ತಿರಲಿಲ್ಲ ಎಂಬಲ್ಲಿ ಹೇಳಲಾಗಿದೆ. ನಮ್ಮ ಶಾಸನಗಳಲ್ಲಿ ಇಂತಹ ಕೆಲಸ ಮಾಡುವವನು 'ಪಂಚಮಹಾ ಪಾತಕನಾಗಲಿ', "ಏಳನೇ ನರಕದ ಹುಳುವಾಗಲಿ" ಎಂದಿರುವುದನ್ನು ಸ್ಮರಿಸ ಬಹುದು. ಆಗ ಬಸವಪ್ಪ (ಕೋಣ–ಎತ್ತು) ನನ್ನು ಕಟ್ಟಿ ಗದ್ದೆ ಹೂಡುತ್ತಿರಲಿಲ್ಲ. ಕಾನನ್ನು ಹೊಕ್ಕು ಜೇನನ್ನು ಕಡಿಯುತ್ತಿರಲಿಲ್ಲ.

ಆದರೆ, ಆ ಸತ್ಯಯುಗ ಕಳೆದ ಮೇಲೆ ಬಂದ ಈ ಕಲಿ ಯುಗದಲ್ಲಿ ಅನ್ಯಾಯ, ಅನಾಚಾರಗಳನ್ನು ಮನುಷ್ಯ ಕಲಿ ತನು. ಕಳ್ಳತನ ಕಲಿತು ಬಡವರ ತಟ್ಟಿಯ ಮನೆಯನ್ನು ಸಹ ಮುರಿದು ದುಡ್ಡನ್ನು ಗಳಿಸಹತ್ತಿದನು. ಗಂಡ ಬಿಟ್ಟ ವಳನ್ನು ತಂದು ಮದುವೆಯಾದನು. ಹುಟ್ಟಿದ ಮೇಲೆ ಆತನಿಗೆ ನಿಜ ಹೇಳಿಯೇ ಗೊತ್ತಿಲ್ಲ. ಇಂತಹ ಜನರನ್ನು ಜನರೇ ಅಂತ್ಯದಲ್ಲಿ ನಾಶಗೊಳಿಸುತ್ತಾರೆ. ಈ ರೀತಿಯ ಯುಗ ಮಹಿಮೆ ಕುರಿತ ತಿಳುವಳಿಕೆ ಶಿರಾಲಿಯ ಗೊಂಡ ರಂತಹ ಅನಕ್ಷರಸ್ಥರಲ್ಲಿರುವದು ವಿಚಿತ್ರವೂ, ಗಮನಾರ್ಹವೂ ಆಗಿದೆ.

ಈ 'ಕಲಿಕಾಲ' ಹಾಡಿನ ಪ್ರಾರಂಭದ ಎರಡು ಸಾಲು ಗಳು 'ಈ ಹಾಡಿನವೇ ಹೌದೇ?' ಎಂಬ ಅನುಮಾನ ಬರು ವಂತಿದೆ. ಈ ಎರಡು ಸಾಲುಗಳು ಗೋಕರ್ಣದಲ್ಲಿ ತುಂಬ ಮನೆಗಳು ಇರುವದನ್ನೂ, ಕಾರವಾರದಲ್ಲಿ ಅತಿವೃಷ್ಟಿಯಾಗು ವದನ್ನೂ ಸೂಚಿಸುತ್ತವೆ. 'ಕಲಿಕಾಲ' ಹಾಡಿಗೆ ಈ ಎರಡು

ಸಾಲುಗಳ ಸಂಬಂಧವೇನೆಂದು ತಿಳಿಯದು. ಆ ಹಾಡು ಇಂತಿದೆ:

ಕಲಿಕಾಲ

ಗೋಕನದಲ್ಲಿ ವಂದೇ ಮನೆಯೋ ಸಲ್ಲಾ
ಕಾರ್ವಾರದಲ್ಲಿ ವಂದೇ ಮಳೆಯೋ ಸಲ್ಲಾ
ವಂದು ತಾಯಿಗೆ ವಬ್ಬ ಮಗ ಹುಟ್ಟಿದಾ
ಹುಟ್ಟಿದವನೇ ತಾನೇ ಬೆಳೆದವನೇ
ಸತ್ಯಕಾಽಲಕೆ ಸತ್ಯ ನೆಡಿತಾಽವಿತ್ತೂ
ಕಲ್ಕಿದಲ್ಲೀ ಕಲ್ಕಿ ಕಾಲಾಽದಲ್ಲೀ
ವಂದ್ ಹಾದಿಲಿ ವಬ್ಬ ಹೋಗ್ವಲ್ಲಾ
ವಬ್ಬನ ಹೆಂಡ್ತಿ ವಬ್ಬ ತಂದೀ ಆಳ್ವಲ್ಲಾ
ಬಿಡದಾರಿಗೇ ಸಾಲೀ ಕೊಡ್ವಲ್ಲಾ
ವಬ್ಬ ಕಟ್ಟಿದಾ ಕಟ್ಟೆ ಕೆಡ್ವಲ್ಲಾ

ಅರ್ರ ಮೋನೇ ದಾನ್ನಿ ಬೆಳ್ವಲ್ಲಾ
ಬಸ್ವಪ್ಪನಾಽ ಕಟ್ಟಿ ಹೂಡ್ವಲ್ಲಾ
ಕಾನ ಹೊಕ್ಕೀ ಜೇನು ಕಡ್ವವಲ್ಲಾ
ಬತ್ತು ಮರಕೇ ಬಳ್ಳಿ ನೆಡ್ವಲ್ಲಾ
ಅಡ್ವಿ ಹೊಕ್ಕೀ ತೊಡ್ವೀ ಹೊಯ್ದ್ವಲ್ಲಾ
ಸತ್ಯ ಕಾಲವೂ ಹಿಂದೇ ಕಳ್ದ ಹೋದವೂ
ಕಲ್ಕಿದಲ್ಲೀ ಕಲ್ಕಿ ಕಾಲಾದಲ್ಲೀ

ಕಲ್ಯಾಽನೀಗೂ ಕಲ್ಕಿ ಅವತಾಽರವಾ
ಕಣ್ಣಾಟ್ಗೀ ಕಳ್ಳತನ ಮಾಡ್ವ್ಯಾನ್ಽದಾ
ತಟ್ಟೀ ತಳರೂ ಹೊಕ್ಕಿ ಘುಂಟವ್ಯಾನ್ಽದಾ

ನಜಬಂಡನೂ ಅವ ನರಪುಂಡನೂ
ಬಿಟ್ಟವ್ನ ಹಿಣಲೇಽ ತಂದು ಆಳ್ವ್ಯಾನ್ದಾ
ಹಗ್ಲು ಕಂಡದ ರಾತ್ರಿ ಇಡ್ವದಿಲ್ಲೀ
ಹುಟ್ಟದ ಮೇಲೆ ಕರಿಯೋ ಹೇಳವಾದಿಲ್ಲೀ
ನಜಬಂಡನೋ ಅವ ನರಪುಂಡನೂ
ಜನ್ರ ಕಯ್ಯಲ್ಲೀ ನಾಶವಾಗುವನೂ

‘ಕಾಡೀಹಾಡು’ ಎಂಬ ಹಾಸ್ಯಪದವೊಂದನ್ನು ಕಬ್ರಿಯ ತಿಮ್ಮಪ್ಪ ಸೋಮಯ್ಯ ಗೊಂಡ ಎಂಬುವರು ಹೇಳಿದ್ದು, ಈ ಹಾಡನ್ನು ಮನರಂಜನೆಗಾಗಿಯೇ ರಚಿಸಿದಂತಿದೆ. ಕಾಡಿ ಅಥವಾ ಕಾಡ್ಯ ಎಂಬುವನು ಸೂಳೆಯ ಮನೆಗೆ ಹೋಗುವ ಬಯಕೆ ಹೊಂದಿದನು. ಅವನು ತನ್ನ ಹೆಂಡಿರ–ಮಕ್ಕಳ ಆಶೆ ಬಿಟ್ಟು ಒಂದು ಕಾಸಿನ ಅಕ್ಕಿ, ಒಂದು ಕಾಸಿನ ಬೇಳೆ ಇತ್ಯಾದಿ ಒಂದೊಂದು ಕಾಸಿನ ಜೀನಸುಗಳನ್ನು ಕೊಂಡು ಕೊಂಡು ದೇವಾಲಯಕ್ಕೆ ಹೋಗಿ ಅಲ್ಲಿ ಕೈಮುಗಿದು, ಒಂದು ದಿನ ವಾಸ್ತವ್ಯಮಾಡಿ ಸೂಳೆಯ ಅನುಗ್ರಹಕ್ಕಾಗಿ ದೇವರಲ್ಲಿ ಬೇಡಿಕೊಂಡನು. ಆ ಮೇಲೆ ಶಹರಕ್ಕೆ ಹೋಗಿ ಸೂಳೆಯ ಮನೆಗೆ ಹೋದನು. ಈ ಹಳ್ಳಿಯ ಮುಕ್ಯನು ಸೂಳೆಯ ಅಂಗಾಂಗಗಳನ್ನು ವರ್ಣಿಸಿದ್ದು ಹೋಲಿಕೆಗಳನ್ನು

ಕೊಟ್ಟಿದ್ದು ಬಹಳ ಸ್ವಾರಸ್ಯವಾಗಿದೆ. ಅವಳ ನಡಿಗೆ ಹಂಸ ದಂತಲ್ಲ, ಆದರೆ 'ಚವಳಿ' ಎಂಬ ಕೆಂಪಿರುವೆಯ ನಡಿಗೆ ಯಂತೆ; ಮೂಗು ಗೊಬ್ಬರದ ಕೊಕ್ಕೆಯಂತೆ ಇತ್ತಂತೆ. ಆಕೆಯ ದಂತಪಂಕ್ತಿಗಳು ಹೋರಿಯ ದಂತಗಳಂತೆ; ತೊಡೆಯಂತೂ ಮಾಪಿನ ಕಟ್ಟಿಗೆಯ ತೊಲೆಯ ಹಾಗೆ ಗಡುತರವಂತೆ! ಅವಳ ತೋಳು ಬಾಗಿಲಿನ ಪಟ್ಟಿಯ ಹಾಗಂತೆ!! ಹೀಗೆ ಅವನು ಆ ಲಲನೆಯ ರೂಪಲಾವಣ್ಯಕ್ಕೆ ಮನಸೋತು ಅವಳ ಮನೆಯಲ್ಲೇ ಠಿಕಾಣಿ ಹೂಡಿದ.

ಕಾಡೀ ಹಾಡು

ಈವೇಸಲ ಕಾಡ್ಯಾಯೇಸಲಕಾಡ್ಯಾss
ಕಾಡಿಂಗ್ ಕಾಡಿಂಗ್ ವಿದ್ದೊಡ್ಡಾಮೊ
ಮನ್ಯಾs ಬದುಕೀನ್ ಹಂಬಲ ಬಿಟ್ಟೊ
ಗಂಡೂಕsರೀ ನಾsಶನ ಬಿಟ್ಟ
ಬದ್ಕೂs ಬಾಳಿನ್ ಹಂಬಲ ಬಿಟ್ಟ
ಹೇಂಡ್ರೂಮಕ್ಕಳ ದ್ಯಾನ ಬಿಟ್ಟಾ
ಹೆಂಡ್ರೂಮಕ್ಕಳ ಗ್ಯಾನನೆ ಬಿಟ್ಟ
ಸೂಳೀ ಮನಿಗೇ ಹೋಗಬೇಕಂದಾ
ಮುರ್ಡೇಶ್ರ ಮೂಡ್ಲಿಂಗ್ ಯಾವದೇನಂದಾ
ಅಲ್ಲಿಂದಲ್ಲೇ ಗೋಡೇ ಹೋದಾ

ಬಟ್ಕಳ ಪೇಟೇಗೋಡೇ ಬಂದ
ಹೆರಬೈಲ್s ಲೊಳಬೈಲ್ ತಿರಗಡಿ ಕಂಡ್ಯಾs

ಮುಗದಲಿ ಕಯ್ಯಾ ಮುಕ್ಕಲಿ ಗಂಡ್ಯಾ
ವಂದು ವರಕ್ಯಾಸೀನಕ್ಕಿನ ಕೊಂಡ
ವಂದು ವರಕ್ಯಾಸಿನ ಹುಳಿಯುನೆ ಕೊಂಡ
ವಂದು ವರಕಾಸಿನ ಕ್ಯಾಯುನೆ ಕೊಂಡ
ವಂದು ವರಕ್ಯಾಸಿನ ಮೆಣಸನೆ ಕೊಂಡಾ
ವಂದು ವರಕ್ಯಾಸಿನ ಸಂಬಾರ ಕೊಂಡಾ
ವಂದು ವರಕ್ಯಾಸಿನ ಜೀರುಗಿ ಕೊಂಡಾ
ವಂದು ವರಕ್ಯಾಸಿನ ಮೆಂತಿಗ ಕೊಂಡಾ

ವಂದು ವರಕ್ಯಾಸಿನ ಕುತ್ತುಂಬ್ರಿ ಕೊಂಡಾ
ವಂದು ವರಕ್ಯಾಸಿನ ಉಪ್ಪನೆ ಕೊಂಡಾ
ವಂದು ವರಕ್ಯಾಸಿನ ಜೀರುಗಿ ಕೊಂಡಾ
ವಂದು ವರಕ್ಯಾಸಿನ ರಾಗಿನೆ ಕೊಂಡಾ
ವಂದು ವರಕ್ಯಾಸಿನ ಸಂಬಾರ ಕೊಂಡಾ
ವಂದು ವರಕ್ಯಾಸಿನ ನೀರುಳಿ ಕೊಂಡಾ
ಬಾಜೀ ಬರಗೀ ಕಟ್ಟಲೆಗಂಡಾ
ಮುಗ್ದಲಿ ಕಯ್ಯಾ ಮುಕ್ಕಲಿಗಂಡಾ
ಬಟಕಳ್ ಹನುಮಂತದೇವ್ಯೇನೆಂದ
ಅಲ್ಲೀಂದ ವೈಸ್ತ್ರೀ ಉಳದಲೆಕಂಡ

ಹೆರಬೇಲ್ ವಳಬೇಲ್ ತಿರಗಡೆಕಂಡ
ಮುಗ್ದಲಿ ಕಯ್ಯಾ ಮುಕ್ಕಲಿಗಂಡಾ
ಸೂಳೀಮನಿಗೇ ಹೋಗುಬೇಕಂದಾ

ಅಲ್ಲಿಂದಲ್ಲೀ ಗೋಡೇ ಬಂದಾ
ಕsರೀ ಬಂಟ್ಯಾs ಯಾವದೇನಂದಾ
ಅಲ್ಲೊಂದ್ ವೈಸ್ತ್ರೀss ಉಳ್ದಲಿ ಕಂಡಾ
ಹೆರಬೈಲ್ ವಳಬೈಲ್ ತಿರುಗಡೆಳಂಡಾ
ಅಲ್ಲೊಂದ್ ವೈಸ್ತ್ರೀ ಉಳ್ದಲಿ ಕಂಡಾ
ಮುಗದಲೆ ಕಯ್ಯಾ ಮುಕ್ಕಲೆಗಂಡಾ
ಅಲ್ಲಿಂದಲ್ಲೀ ಗೋಡೇ ಬಂದಾ

ತಾರೀಬಾಗ್ಲು ಮಾವ್ಯೇನಂದಾ
ಯಂಗ್ರ್ಯಾಚಾಲು ವಳ್ಳೀವನೆಂದ
ಅಲ್ಲೊಂದ್ ವೈಸ್ತ್ರೀ ವಳ್ದಲಿಕಂಡಾ
ಹೆರಬೈಲ್ ವಳಬೈಲ್ ತಿರಗಾಡಕಂಡಾ
ಮುಗದಲೆ ಕಯ್ಯಾ ಮುಕ್ಕಲೆಗಂಡಾ
ಅಲ್ಲಿಂದಲ್ಲೀ ಗೋಡಲೆ ಬಂದಾ
ಶೀರಲಿ ಪೇಟೇ ಯಾವದೇನಂದಾ
ಅಲ್ಲೊಂದ್ ವೈಸ್ತ್ರೀ ಉಳ್ದಲಿಕಂಡಾ
ಸೂಳಿಮನಿಗೇ ಹೋಗೀಬಿಟ್ಟಾ
ಸೂಳೀಭಾವಾ ಹೇಗದೆಯುಂದಾ

ಸೂಳೀನೆಡಿಯೂ ಹೇಗದೆಯುಂದಾ
"ಚವಳೀನೆಡಿನಾಂಗ್ ಆಗದೆ"ಯೆಂದ
ಸೂಳೀ ಮೂಗೂs ಹೆಂಗದಿಯೆಂದಾ
'ಗೊಬ್ಬರ ಕೊಕ್ಯಾಂಗ ಅsದೆ'ನಂದಾs

ಸೂಳೀ ಹಲ್ಲೂs ಹೆಂಗದಿಯಂದಾ
"ಹೋರೀ ಹಲ್ಲಾಂಗ್ ಅsದೆ" ಯಂದಾs
ಸೂಳೀ ತೊಡಿಯೂ ಹೇಂಗದೆಯಂದಾ
"ಗುಳವಾಯ್ನ ಕಂಡಿಯಾಂಗ ಇರ್ವದು"ಯಂದಾ
ಸೂಳೀ ತೋಳೂs ಹೆಂಗದಿಯೆಂದಾs
"ಬಾಗ್ಲಿ ತೋಳಾಂಗ ಇರ್ವದು" ಅಂದಾ ೬೦

ಸೂಳೀ ಬೆನ್ನು ಹೇಂಗದಿಯಂದಾ
"ಹೋರೀ ಬೆನ್ನಾಂಗ್ ಇರ್ವದು" ಯಂದಾ
ಸೂಳೀ ಸಂಗಾs ಮಾಡುಕಂಡಾಬಿಟ್ಟಾ
ಸೂಳೀ ಮನಿಲಿ ಉಳ್ಕಂಡಿ ಬಿಟ್ಟಾ ೬೪

ಸುಶಿಕ್ಷಿತರು ಯಾವದೇ ಒಂದು ನೌಕರಿ ಹಿಡಿದು, ಕೆಲವು ವರ್ಷ ಆ ನೌಕರಿಮಾಡಿ ನಿವೃತ್ತಿ ಪಡೆದರೆ ಮುಗಿಯಿತು. ಮುಂದೆ ನಾವು 'ಪೆನ್ಷನ್‌ದಾರ' ಎಂದುಕೊಂಡು ಬೇರಾವ ಕೆಲಸ ಮಾಡದೇ ಬಂದ ನಿವೃತ್ತಿ ವೇತನದಲ್ಲಿಯೇ ಜೀವನ ಸಾಗಿಸುತ್ತ ಕಾಲ ಕಳೆಯುತ್ತೇವೆ. ಆದರೆ, ಅಶಿಕ್ಷಿತರೇ ಬಹುಸಂಖ್ಯೆಯಲ್ಲಿರುವ ಶಿರಾಲಿಯ ಗೊಂಡರು ಸದಾ ಕಾಲವೂ ಕೃಷಿ ಕೆಲಸ ಮಾಡಬಲ್ಲರು, ಸುಂದರವಾದ ಚಾಪೆ ಹೆಣೆಯಬಲ್ಲರು, ತಮ್ಮ ವ್ಯಾಜ್ಯಗಳನ್ನು ಸುವ್ಯವಸ್ಥಿತವಾದ ತಮ್ಮ ನ್ಯಾಯಾಂಗದಿಂದಲೇ ಪರಿಹರಿಸಿಕೊಳ್ಳಬಲ್ಲರು. ಇರುವ ಸ್ವಲ್ಪ ಬಟ್ಟೆಯಲ್ಲಿಯೇ ಸಂಪೂರ್ಣ ಮೈಮುಚ್ಚಿಕೊಳ್ಳಬಲ್ಲರು. ತಾಳೇ ಚಕ್ಕೆಯನ್ನೂ ತಿಂದು ಜೀವಿಸ

ಬಲ್ಲರು, ಚೆನ್ನಾಗಿ ಹಾಡಿ ಕುಣಿದು ತಾವೂ ಸಂತೋಷಪ
ಪರರನ್ನೂ ಸಂತೋಷ ಪಡಿಸಬಲ್ಲರು. ಇವೆಲ್ಲಕ್ಕೂ ಮಿಗಿ
ಗೊಂಡರು ತುಂಬ ಪ್ರಾಮಾಣಿಕರು, 'ಮೋಸ'ವೆಂ
ನೆಂದೇ ತಿಳಿಯುದ ಮುಗ್ಧ ಜನರವರು. ಇಂತಹ ಗೊ
ರಲ್ಲಿ ಅಶಿಕ್ಷಿತರೇ ಜಾಸ್ತಿ ಎನ್ನುವ ವಿಷಯ ಬಿಟ್ಟರೆ ಇ
ಶಿರಾಲಿಗೆ ಕೀರ್ತಿ ತರಬಲ್ಲ, ಹೆಮ್ಮೆಯ ಮಣ್ಣಿನ ಮಕ್ಕ
ಇಂಥ ಹಿಂದುಳಿದವರೆಂದು ತಿಳಿದುಕೊಂಡಿರುವ ಜನರ
ನುುಂದುವರೆದ ನಾವು ಕಲಿತು ಉಳಿಸಿಕೊಳ್ಳಬಹು
ಜೀವನ ಮೌಲ್ಯಗಳು ಬಹಳಷ್ಟಿವೆ.

———

ಉಪನ್ಯಾಸ ಗ್ರಂಥಮಾಲೆಯ ಇತ್ತೀಚಿನ ಪ್ರಕಟನೆಗಳು

೧ ತುಂಗಭದ್ರಾ ನೀರಾವರಿ ಬೆಳೆಗಳು
—ವಿಜಯಕುಮಾರ ಗಿಡ್ನವರ

೨ ದ್ರಾವಿಡ ಜನಾಂಗ
—ಸಂಗಮೇಶ ಡಿ. ಸವದತ್ತಿಮಠ

೩ ವರಲಕ್ಷ್ಮಿ ಹೈಬ್ರಿಡ್ ಹತ್ತಿ
—ವಿಜಯಕುಮಾರ ಗಿಡ್ನವರ

೪ ಜೋಳದ ಕೀಟ ಪಿಡುಗುಗಳು ಹಾಗೂ ಅವುಗಳ ಹತೋಟಿ
—ಕೆ. ಎ. ಕುಲಕರ್ಣಿ

೫ ಬಾಲಲೀಲಾ ಮಹಾಂತ ಶಿವಯೋಗಿ
—ಎಸ್. ಎಸ್. ಭೂಸರಡ್ಡಿ

೬ ಮೈಲಾರ ಬಸವಲಿಂಗ ಶರಣರು
—ದೇವೇಂದ್ರಕುಮಾರ ಹಕಾರಿ

೭ ತರ್ದವಾಡಿ ನಾಡು
—ಆರ್. ಎನ್. ಗುರವ

೮ ಪ್ರಾಥಮಿಕ ಶಿಕ್ಷಣದ ಸಮಸ್ಯೆಗಳು
—ಸಿ. ಹನುಮೇಗೌಡ

೯ ಹಾವುಗಳು ಮಾನವನ ಮಿತ್ರ-ಶತ್ರು
—ಎನ್. ಟಿ. ಮೋಟೆಬೆನ್ನೂರ

೧೦ ಶ್ರೀ ತೋಂಟದ ಸಿದ್ಧಲಿಂಗ ಶಿವಯೋಗಿಗಳು
—ಎ. ಆರ್. ಪಾಟೀಲ

೧೧ ವೇದಗಳು ವೇದಾಂಗಗಳು ಮತ್ತು ವೇದಾಂತ ತತ್ತ್ವ
—ಬಿ. ಎನ್. ಕೃಷ್ಣಮೂರ್ತಿ

ಪ್ರಸಾರಾಂಗ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೫೮೦ ೦೦೩